**B.A -3rd year**

**ಕರ್ನಾಟಕದ ಆರ್ಥಿಕತೆ**

**ಅಧ್ಯಾಯ -1**

**ಕರ್ನಾಟಕದ ಆರ್ಥಿಕತೆ – ಒಂದು ಸ್ಥೂಲ ಸಮೀಕ್ಷೆ**

1. ಪೀಠಿಕೆ
2. ಕರ್ನಾಟಕ ಆರ್ಥಿಕ ವ್ಯವಸ್ಥೆಯ ಪ್ರಮುಖ ಲಕ್ಷಣಗಳು
3. ಕರ್ನಾಟಕದ ನೈಸರ್ಗಿಕ ಸಂಪನ್ಮೂಲಗಳು
    - ಕರ್ನಾಟಕದ ಭೂ ಸಂಪತ್ತು
    - ಅರಣ್ಯ ಸಂಪನ್ಮೂಲ
    - ಜಲಸಂಪನ್ಮೂಲ
    - ಖನಿಜ ಸಂಪನ್ಮೂಲಗಳು
    - ಇಂಧನ ಸಂಪನ್ಮೂಲಗಳು

4.ಉಪಸಂಹಾರ

1. ಪೀಠಿಕೆ:- ಜಗತ್ತಿನ ಅತ್ಯಂತ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದ 8 ನೇ ಅತೀ ದೊಡ್ಡ ರಾಜ್ಯವಾಗಿರುವ ಕರ್ನಾಟಕವು

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನ ಅದು ಹೊಂದಿದೆ. ಕಾವೇರಿ, ಕೃಷ್ಣಾ, ತುಂಗಭದ್ರ ನೇತ್ರಾವತಿ ಮುಂತಾದ ಪ್ರಮುಖ  ನದಿಗಳು,ಅಪಾರ ಖನಿಜ ಸಂಪತ್ತು, ಹಲವರು ಪರ್ವತ ಶ್ರೇಣಿಗಳು, ಅರಣ್ಯ ಮತ್ತು ಪ್ರಾಣಿ ಸಂಪತ್ತು ಹೋಂದಿರುವ ಕರ್ನಾಟಕವು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು

ಸಂಸ್ಕೃತಿಕವಾಗಿ ದೇಶದ ಎಲ್ಲರ ಗಮನ ಸೆಳೆಯುತ್ತಿದೆ. ಇತ್ತೀಚಿನ ವರ್ಷಗಳಲ್ಲಿ  ತಾಂತ್ರಿಕ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಾಧಿಸಿದ ಆದ್ಭುತ ಪ್ರಗತಿಯಿಂದಾಗಿ  ಈಗ ವಿಶ್ವದ ಎಲ್ಲರ ಗಮನವನ್ನು ತನ್ನತ್ತ ಸೆಳೆಯುತ್ತಿದೆ. ಅಭಿವೃದ್ಧಿ ಪಥದಲ್ಲಿ ಮೃದುವಾಗಿ ಸಾಗುತ್ತಿರುವ ನಮ್ಮರಾಜ್ಯವು ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದ ಅನೇಕ ಜ್ವಲಂತ ಸಮಸ್ಯಗಳ ಸುಳಿಗೆ ಸಿಲುಕಿಕೊಂಡೂ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಲು ಪ್ರಯತ್ನಿಸುತ್ತಿದೆ.

## 2.ಕರ್ನಾಟಕ ಆರ್ಥಿಕ  ವ್ಯವಸ್ಥೆಯ ಪ್ರಮುಖ ಲಕ್ಷಣಗಳು:-

- ಕೃಷಿಯ ಪ್ರದ್ಯನ್ಯತೆ
- ಏರಿಕೆಯಾಗುತ್ತಿರುವ ತಲಾದಯ
- ಜನಸಂಖ್ಯೇಯ ತೀವ್ರ ಬೆಳವಣಿಗೆ
- ಆದಾಯ ಅಸಮಾನತೆ ಮತ್ತು ಬಡತನ
- ನಿರುದ್ಯೋಗ
- ಹೆಚ್ಚಿರುವ ಬಂಡವಾಳ ಪೂರೈಕೆ
- ತಾಂತ್ರಿಕ ಸುಧಾರಣೆ
- ಉದ್ಯಮ ಶೀಲರ ಕೊರತೆ
- ಬಳಕೆಯಾಗದಿರುವ  ಸಂಪನ್ಮುಲಗಳ  ಅಸ್ತಿತ್ವ
- ಸಾರಿಗೆ ಸಂಪರ್ಕಗಳ ಕೊರತೆ
- ದ್ವಂದ್ವ ಆರ್ಥಿಕತೆ
- ಮಿಶ್ರ ಆರ್ಥಿಕ ವ್ಯವಸ್ಥೆ
- ಕಾರ್ಮಿಕರ ಅದಕ್ಷತೆ
- ಅದಕ್ಷ ಆಡಳಿತ
- ಪರಿಸರ ನಾಶ

## ಕರ್ನಾಟಕದ ನೈಸರ್ಗಿಕ ಸಂಪನ್ಮೂಲಗಳು

**(Natural Resources of Karnataka)**

**ಕರ್ನಾಟಕದ ನೈಸರ್ಗಿಕ ಸಂಪನ್ಮೂಲಗಳು**

**ಆರ್ಥಿಕ ಅಭಿವೃದಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.ಹೇರಳ**

**ನೈಸರ್ಗಿಕ ಸಂಪನ್ಮೂಲ ಹೊಂದಿರುವ ರಾಜ್ಯ ಅಥವಾ ದೇಶವಾದರು ತ್ವರಿತ ಆರ್ಥಿಕ ಅಭಿವೃದ್ಧಿ ಯನ್ನು ಸಾಧಿಸಿ ಶ್ರೀಮಂತ, ಬಲಿಷ್ಟವು ಆಗಬಲ್ಲದು ಆದರೆ ಲಭ್ಯವಿರುವ ಸಂಪನ್ಮಗಳು ವ್ಯವಸ್ಥಿತವಾಗಿ ಮತ್ತು ಸಮರ್ಪಕವಾಗಿ ಬಳಸಿಕೊಳ್ಳಬೇಕಶ್ಟೇ. ನೈಸರ್ಗಿಕ ಸಂನ್ಮೂಲ ಳ ಕೊರತೆಯನ್ನು ಅನುಭವಿಸುತ್ತಿರುವ ಯಾವುದೇ ರಾಜ್ಯ ಅಥವಾ ದೇಶ**

**ಹಿಂದುಳಿದಿರುವ  ಸಾಧ್ಯತೆಗಳೇ ಹೆಚ್ಚು.**

**ನೈಸರ್ಗಿಕ ಸಂಪನ್ಮೂಲಗಳ ಅರ್ಥವಿವರಣೆ:-**

ಪ್ರಕತಿಯಲ್ಲಿ ನಿಸರ್ಗದ ಕೊಡುಗೆ ರೂಪದಲ್ಲಿ ಪುಕ್ಕಟೆಯಾಗಿ ಸಿಗುವ

ಸಂಪನ್ಮೂಲ ಗಳನ್ನು ನೈಸರ್ಗಿಕ ಸ ಸಂಪನ್ಮೂಲ' (ಸ್ವಾಭಾವಿಕ ಸಂಗೂಲ) ಗಳೆಂದು ಕರೆಯಲಾಗುತ್ತದೆ .

ಈ ಸಂಪನಲಗಳು ಮಾನವನಿಗೆ ಉಚಿತವಾಗಿ ಲಭ್ಯವಿವೆ. ಆದ್ದರಿಂದ ಅದು ನಿಸರ್ಗದ ಅಮೂಲ್ಯ ಕೊಡುಗೆಗಳಾಗಿವೆ . ಭೂಮಿ, ಹವಾಮಾನ, ಅರಣ್ಯ, ಜಲಸಂಪತ್ತು, ಮತಸ್ಯ ಸಂಪತ್ತು ,ಖನಿಜಗಳು , ಮಣ್ಣು ಮಳೆ, ಮೃಗಗಳು, ತೈಲ ಮುಂತಾದವು ನೈಸರ್ಗಿಕ ಸಂಪನಗಳಿಗೆ ಉದಾಹರಣೆಗಳಾಗಿವೆ.

ಈ ಸಂಪನ್ಮೂಲಗಳಲ್ಲಿ ಕೆಲವನ್ನು ನೇರವಾಗಿ ಅವುಗಳ ಮೂಲರೂಪದಲ್ಲಿಯೇ ಬಳಸಹುದು ಹಾಗೂ ಕೆಲವನ್ನು ಅವುಗಳ ಮೂಲರೂಪವನ್ನು  ಬದಲಿಸಿ ಬಳಸಬಹುದು.

ಪ್ರಕಾರಗಳು ( **Kiande)**

ನೈಸರ್ಗಿಕ ಸಂಪನ್ಮೂಲಗಳನ್ನು ವಿವಿಧ ಆಧಾರದಲ್ಲಿ ವಿಂಗಡಿಸಬಹುದಾಗಿದೆ. ಅವುಗಳಶೋಧನೆಯ ಆಧಾರದ ಮೇಲೆ ಎರಡು ಪ್ರಕಾರಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ

**1) ವ್ಯಕ್ತಿ ಸಂಪನ್ಮೂಲಗಳು / known resources ) ಮತ್ತು**

**4) ಅವಕ್ತ ಅಥವಾ ಸುಪ್ತ ಸಂಪನ್ಮೂಲಗಳು (unknown resources)**

ವ್ಯಕ್ತ ಸಂಪನ್ಮೂಲಗಳೆಂದರೆ ಈಗಾಗಲೇ ಶೋಧಿಸಲ್ಪಟ್ಟು ಬಳಕೆಯಾಗು ಸಂಪನುಲಗಳು.

ಅವಕ್ತ ಅಥವಾ ಸುಪ್ತ ಸಂಪನ್ಮೂಲಗ ಳಂದರೆ ಇದು ಕೊಧಿಸಲ್ಪಡಬೇ ಕಾದ ಭೂಮಿಯ ಒಳಗೆ ಅಡಗಿರುವ ಸಂಪನ್ಮೂಲಗಳು.

- ನೈಸರ್ಗಿಕ ಸಂನ್ಮೂಲಗಳನ ಮಹತ್ವ :-

  1.ಕೃಷಿ ಅಭಿವೃದ್ಧಿ.

  2.ಕೈಗಾರಿಕೆ ಅಭಿವೃದ್ಧಿ

  3. ಸಾರಿಗೆ ಸಂಪರ್ಕಗಳ ಅಭಿವೃದ್ಧಿ

  4.ವ್ಯಾಪಾರ ಮತ್ತು ವಾಣಿಜ್ಯ ಪ್ರಗತಿ

5.ವಿದೇಶಿ ವಿನಿಮಯದ ಗಳಿಕೆ

6.ಜೀವನ ಮಟ್ಟದ ಸುಧಾರಣೆ

7. ಸರ್ವಾಂಗೀಣ ಅಭಿವೃದ್ಧಿ

ಕರ್ನಾಟಕದಲ್ಲಿ ವಿವಿಧ ರೀತಿಯ ನೈಸರ್ಗಿಕ ಸಂಪನ್ಮೂಲಗಳು ಲಭ್ಯವಿದೆ ಮುಖ್ಯವಾಗಿ,

1) ಭೂ ಸಂಪತ್ತು

2) ಅರಣ್ಯ ಸಂಪತ್ತು

3) ಜಲ ಸಂಪತ್ತು

4) ಖನಿಜ ಸಂಪತ್ತು ಹಾಗೂ

5) ಶಕ್ತಿ ಸಂಪತ್ತು, ಎಂದು ವರ್ಗೀಕರಿಸಬಹುದು.

## 2.1 ಕರ್ನಾಟಕದ ಭೂ ಸಂಪತ್ತು

## (Land resources of Karnataka)

ಎಲ್ಲಾ ನೈಸರ್ಗಿಕ ಸಂಪನ್ಮೂಲಗಳಲ್ಲೇ ಭೂಮಿಯು ಅತ್ಯಂತ ಮಹತ್ವ

ಮಾನವ ಮತ್ತು ಇತರೆ ಜೀವಿಗಳು ಬದುಕಲು ಆಶ್ರಯಿಸುವುದನ್ನು ಭೂಮಿಗೆ ಮಾನವನು ಬದುಕಲು ಅಗತ್ಯವಿರುವ ಪ್ರಾಥಮಿಕ ಉತ್ಪಾದಕ ಚಟುವಟಿಕೆಗೆ ಭೂಮಿಯ ಒಂದು ನವೀಕರಿಸಬಹುದಾದ ಸಂಪನ್ಮೂಲವಾಗಿದ್ದು ಅದರ ಮೇಲೆ ಅಸಂಖ್ಯ ಜೀವಿಗಳುವಾಸಿಸುತ್ತಿವೆ.

- **|ಕರ್ನಾಟಕದಲ್ಲಿ ಭೂಬಳಕೆ (Land utilisation in Karnataka)**
- ಮಣ್ಣಿನ ವಿಧಗಳು

1. ಕಪ್ಪು ಮಣ್ಣು
2. ಕೆಂಪು ಮಣ್ಣು
3. ರೇವೆ ಮಣ್ಣು
4. ಜಂಬು ಮಣ್ಣು

- ಭೂ ಸವೆತ:- ಭೂಸವೆತದ ಅರ್ಥ ಮಣ್ಣಿನ ಫಲವತ್ತತೆಯ ನಷ್ಟವನ್ನು ಸವೆತ ಎನ್ನಲಾಗುತ್ತದೆ. ಅಂದರೆ, ಮಣ್ಣಿನ ಫಲವತ್ತಾದ ಮೆ ಲ್ಪದರ ನಾಶ ವಾಗುವ ಕ್ರೀಯಯೆ ಆಥವಾ ಅವನತಿ ಹೊಂದುವುದು ಭೂಸವೆತವಾಗುತ್ತದೆ. ಭೂಸವೆತದ ಸನ್ನಿವೇಶದ ಮಳೆ ಅಥವಾ ಗಾಳಿಯಿಂದ ಮಣ್ಣಿನ ಮೇಲ್ಪದರು ತೇಲಿ ಹೋದಾಗ ಹಳ್ಳ ಅಥವಾ ಕೊರಕಲು ರೂಪುಗೊಳ್ಳುತ್ತದೆ ಮತ್ತು ಮಣ್ಣಿನ ಫಲವತ್ತತೆಯಲ್ಲಿ ಕೊರತೆ ಉಂಟಾಗುತ್ತದೆ ಎಂದು ಹೇಳಬಹುದು.

ಭೂ ಸವೆತಕ್ಕೆ ಕಾರಣಗಳು

1. ನೈಸರ್ಗಿಕ ಕಾರಣಗಳು

1. ಪ್ರವಾಹಗಳು

11. ಬಲಿಷ್ಟ ಸೆಳೆತ

ill, ಚಂಡಮಾರುತ

jv, ಇರಾಕಾರ ಮಳೆ

2. ಮಾನವ ನಿರ್ಮಿತ ಕಾರಣಗಳು

**1.ದೋಷಪೂರಿತ ಸಾಗುವಳಿ ಪದ್ಧತಿ**

**2.ಅತಿಯಾದ ಹುಲ್ಲು ಮೆಯಿಸುವಿಕೆ**

**3.ಅರಣ್ಯ ನಾಶ**

**4.ದೋಷಪೂರಿತ ನೀರಾವರಿಯ ಪದ್ಧತಿ**

*** ಭೂ ಸರಾ ಸಂರಕ್ಷಣೆ**

**ಭೂ ಸಾರ ಸಂರಕ್ಷಣೆ ಎಂದರೆ ಭೂಸವೆತವನ್ನು ತಡೆಗಟ್ಟುವುದು ಮತ್ತು ಮಣ್ಣಿನ ಫಲವತ್ತತೆ ಸುಧಾರಿಸುವುದು.**

- **ಭೂ ಸಾರ ಸಂರಕ್ಷಣೆಯ ಕ್ರಮಗಳು(Methods and measures of soil conservation)**

ಭೂಸಾರವನ್ನು ಸಂರಕ್ಷಿಸುವ ಕೆಲವು ಕ್ರಮಗಳೆಂದರೆ;

**1. ಅರಣೀಕರಣ (Afforestation)**

**2. ಅತಿಯಾದ ಹುಲ್ಲು ಮೇಯಿಸುವಿಕೆಯ ನಿಯಂತ್ರಣ,**

**3. ಪ್ರವಾಹವನ್ನು ತಡೆಗಟ್ಟಲು ಒಡ್ಡು ನಿರ್ಮಾಣ.**

**4. ವಿವಿಧ ವರ್ಷಗಳಲ್ಲಿ ವಿವಿಧ ಬೆಳೆ ಬೆಳೆಯುವ ಆವರ್ತ ವಿಧಾನ**

5. ನೀರು ಬಸಿಯುವಿಕೆಯನ್ನು ತಡೆಯಲು ಚರಂಡಿ ನಿರ್ಮಾಣ.

6. ಲವಣೀಭವನಗೊಂಡ ಮತ್ತು ನೀರು ಬಸಿಯುವಿಕೆಗೆ ಒಳಗಾದ ಭೂಮಿಯನ್ನು  ಮರುಬೇಸಾಯಕ್ಕೆ ಒಳಪಡಿಸಲು ಪುನರ್ ಸಾಗುವಳಿ ಯೋಜನೆಯ ಜಾರಿ.

7. ಒಡ್ಡುಗಳು, ಕಟ್ಟೆಗಳು, ಆಣೆಕಟ್ಟುಗಳು ಮುಂತಾದುವನ್ನು ನಿರ್ಮಿಸುವ ಮೂಲಕ ನೀರಿನ ಹರಿಯುವಿಕೆಯ ನಿಯಂತ್ರಣ.

8. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ರಸಗೊಬ್ಬರ ಮತ್ತು ಸಾವಯವ ಗೊಬ್ಬರಗಳ ಬಳಕೆ.

9. ವೈಜ್ಞಾನಿಕ ಬೇಸಾಯ ಕ್ರಮದ ಆಳವಡಿಕೆ, ಇತ್ಯಾದಿ.

ಕರ್ನಾಟಕದಲ್ಲಿ ಭೂಸಾರ ಸಂರಕ್ಷಣಾ ಕಾರ್ಯವನ್ನು ಕೃಷಿ ಇಲಾಖೆಯು ಕೇಂದ್ರ ಸರ್ಕಾರದಕೇಂದ್ರ ಭೂಸಾರ ಸಂರಕ್ಷಣಾ ಮಂಡಳಿ (Central soil conservation Board) ಯ ತಾಂತ್ರಿಕ
ಹಾಗೂ ಹಣಕಾಸು ನೆರವಿನ ಮೂಲಕ ಕೈಗೊಂಡಿದೆ.

## 2.2 ಅರಣ್ಯ ಸಂಪನ್ಮೂಲಗಳು(Forest resources)

ಅರಣಗಳು ಕರ್ನಾಟಕದ ಅತ್ಯಮೂಲ್ಯ ಸಂಪನ್ಮೂಲಗಳಾಗಿವೆ. ವೈವಿಧ್ಯಮಯವನಸಂಪತ್ತನ್ನು ಹೊಂದಿರುವ ರಾಜ್ಯದಲ್ಲಿ ತೇಗ, ಬೀಟೆ, ಶ್ರೀಗಂಧ, ಹೊನ್ನೆ, ನಂದಿ, ದೇವದಾರು ಮುಂತಾದ ಬೆಲೆಬಾಳುವ ಮರಗಳೂ, ಕಾಗದ ಉದ್ಯಮಕ್ಕೆ ಅವಶ್ಯವಾದ ಬಿದಿರು ಲಭ್ಯವಿವೆ.

ಅತ್ಯಮೂಲ ಗಿಡಮೂಲಿಕೆಯ ಸಸ್ಯಗಳು ರಾಜ್ಯದ ಅರಣ್ಯದಲ್ಲಿ ಕಂಡು ಬರುತ್ತವೆ. ಅಪಾರಪ್ರಾಣಿ-ಪಕ್ಷಿಗಳ ಸಂಕುಲವನ್ನು ಹೊಂದಿರುವ ಇಲ್ಲಿಯ ಅರಣ್ಯಗಳು ಪ್ರಮುಖ ವನ್ಯಜೀವಿತಾಣಗಳಾಗಿವೆ.

ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶ 190.50 ಲಕ್ಷ ಹೆಕ್ಟೇರುಗಳಾಗಿದ್ದು, 2014-15 ರಕರ್ನಾಟಕ ಆರ್ಥಿಕ ಸಮೀಕ್ಷೆ ಪ್ರಕಾರ ವಾಸ್ತವ ಅರಣ್ಯ ಪ್ರದೇಶವು 30.73 ಲಕ್ಷ ಹೆಕ್ಟೇರುಗಳಾಗಿದೆ.

ಇದು ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ.22.60 ರಷ್ಟಾಗಿರುತ್ತದೆ. ಭಾರತದ ಅರಣ್ಯ ಸರ್ವೇಕ್ಷಣವರದಿಯ

ಪ್ರಕಾರ ರಾಜ್ಯದಲ್ಲಿ ಅರಣ್ಯವನ್ನು ಆವರಿಸಿರುವ ಒಟ್ಟು ಪ್ರದೇಶ 36194 ಚ.ಕಿ.ಮೀಗಳು

(2011) ಆಗಿದೆ. ರಾಜ್ಯದ ಎಲ್ಲಾ ಭಾಗಗಳಲ್ಲೂ ಅರಣ್ಯವು ಒಂದೇ ಸಮನಾಗಿ ಆವರಿಸಿಲ್ಲ. ರಾಜ್ಯದಲ್ಲಿಹೆಚ್ಚಿನ ಅರಣ್ಯ ಪ್ರದೇಶವು ಪಶ್ಚಿಮದ ಮಲೆನಾಡು ಪ್ರದೇಶಗಳಲ್ಲಿ ಕಂಡುಬರುತ್ತದೆ. ಉತ್ತರ ಕನ್ನಡ

ಜಿಲ್ಲೆಯ ಒಟ್ಟು ಭೂಭಾಗದ ಶೇ. 75.98 ಭಾಗ ಅರಣ್ಯದಿಂದ ಕೂಡಿದ್ದು, ಇದು ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದೆ. ಬಿಜಾಪುರ ಜಿಲ್ಲೆಯ ಶೇಕಡ 0.11 ಭಾಗ ಮಾತ್ರ ಅರಣ್ಯದಿಂದ ಕೂಡಿದ್ದು, ಇದು ರಾಜ್ಯದಲ್ಲಿ ಕನಿಷ್ಟ ಸ್ಥಾನವನ್ನು ಪಡೆದಿದೆ. ಶೇಕಡಾ 0.19 ಭಾಗ ಮಾತ್ರ ಅರಣ್ಯದಿಂದ ಕೂಡಿರುವಕೊಪ್ಪಳ ಜಿಲ್ಲೆಯು ತದನಂತರದ ಸ್ಥಾನ ಪಡೆದಿದೆ. ವಿವೇಚನೆಯಿಲ್ಲದೆ ನಿರಂತರ ಕಾಡು ನಾಶಮಾಡುತ್ತಿರುವುದರಿಂದ ರಾಜ್ಯದಲ್ಲಿ ಸತತವಾಗಿ ಅರಣ್ಯದ ಪ್ರಮಾಣ ಕಡಿಮೆಯಾಗುತ್ತಿದೆ.

- ಅರಣ್ಯ ಸಂಪತ್ತಿನ ಪ್ರಾಮುಖ್ಯತೆ:-

1. ಕೃಷಿ ಅಭಿವೃದ್ಧಿ

2. ಕೈಗಾರಿಕಾಭಿವೃದ್ಧಿ

3. ವಿದೇಶಿ ವಿನಿಮಯ ಗಳಿಕೆ

4. ಆದಾಯ ಮತ್ತು ಉದ್ಯೋಗ

5. . ಉತ್ತಮ ಹವಹವಾಮಾ

6. ವನ್ಯಮೃಗ ರಕ್ಷಣೆ

7. ಸರ್ಕಾರಕ್ಕೆ ಆದಾಯ

8. ಉರುವಲು ಪೂರೈಕೆ

10. ಕಾಲಕ್ಕೆ ಸರಿಯಾಗಿ ಮಳೆ

11. ಪ್ರವಾಹ ನಿಯಂತ್ರಣ

* ಕರ್ನಾಟಕದ ಅರಣ್ಯದ ವಿಧಗಳು

1. ನಿತ್ಯ ಹರಿದ್ವರ್ಣದ ಅರಣ್ಯಗಳು

2. ಮಿಶ್ರ ಅರಣ್ಯಗಳು

3, ಎಲೆ ದುದುವ ಅರಣ್ಯಗಳು

4.ಕುರುಚಲು ಅರಣ್ಯಗಳು

# ಕರ್ನಾಟಕ ಸರ್ಕಾರದ ಕೆಲವು ಅರಣಾಭಿವೃದ್ಧಿ ಕಾರ್ಯಕ್ರಮಗಳು

1, ಕಾಡು ಬೆಳೆಸುವ ಕಾರ್ಯಕ್ರಮ

2  ಸಾಮಾಜಿಕ ಅರಣ್ಯಾಭಿವೃದ್ಧಿ

3, ಶಾಲಾವನ ಕಾರ್ಯಮ

4, ಗ್ರಾಮ ಅರಣ್ಯ ಸಮಿತಿಗಳ ರಚನೆ

5.ತೋಟ ಅರಣೀಕರಣ ಕಾರ್ಯಕ್ರಮ

6. ವನವಿಕಾಸ ಯೋಜನೆ

7. ವಲಯ ಯೋಜನಾ ಕಾರ್ಯಕ್ರಮಗಳು

8. ಅರಣ್ಯ ಶಿಕ್ಷಣ ಮತ್ತು ಸಂಶೋಧನೆ

9. ಕರ್ನಾಟಕ ರಾಷ್ಪ ಅರಣ್ಯ ಕೈಗಾರಿಕಾಭಿವೃದ್ಧಿ ನಿಗಮ

ರಾಷ್ಟ್ರೀಯ ಉದ್ಯಾನವನಗಳು ಮತ್ತು ಆಭಯಾರಣ್ಯಗಳು

**(National parks and wildlife sanctuaries)**

ಕರ್ನಾಟಕದಲ್ಲಿ 5 ರಾಷ್ಟ್ರೀಯ ಉದ್ಯಾನವನಗಳು ಹಾಗೂ 25 ಅಭಯಾರಣ್ಯಗಳು ಇದು.ಇವು ಒಟು 8384 ಚ.ಕಿ.ಮೀಗಳನ್ನು ವ್ಯಾಪಿಸಿಕೊಂಡಿವೆ. ಇದು ರಾಜ್ಯದ ಒಟ್ಟು ಅರಣ್ಯ ಪ್ರದೇಶಶೇ. 19.3 ರಷ್ಟು ಆಗಿದೆ. ಈ ಉದ್ಯಾನವನಗಳು ಮತ್ತು ಅಭಯಾರಣ್ಯಗಳು ನಿತ್ಯ ಹರಿದ್ವರ್ಣದಅರಣ್ಯ ಪ್ರದೇಶಗಳೂ ಸೇರಿದಂತೆ ಕುರುಚಲು ಕಾಡುಗಳವರೆಗೆ ವಿವಿಧ ಅರಣ್ಯ ವೈವಿಧ್ಯತೆಯುಳ್ಳಪ್ರದೇಶಗಳಲ್ಲಿ ವ್ಯಾಪಿಸಿಕೊಂಡಿವೆ. ಇಲ್ಲಿ ವಿವಿಧ ಜೈವಿಕ ಪರಿಸರ, ವಿನಾಶದ ಅಂಚಿನಲ್ಲಿರುವ ಸಸ್ಯ ಪ್ರಾಣಿ ಮತ್ತು ಪಕ್ಷಿ ಸಂಕುಲಗಳು ಕಂಡು ಬರುತ್ತವೆ. ಒಟ್ಟು ಸುಮಾರು 5881 ಆನೆಗಳು ಮತ್ತು 300

ಹುಲಿಗಳು ಇಲ್ಲಿವೆ. ರಾಷ್ಟ್ರದ ಒಟ್ಟು ಆನೆಗಳ ಸಂಖ್ಯೆಯ ಶೇ. 25ರಷ್ಟು ಮತ್ತು ಹುಲಿಗಳ ಒಟ್ಟುಸಂಖ್ಯೆಯ ಶೇ. 20ರಷ್ಟು ರಾಜ್ಯದ ವನ್ಯಧಾಮಗಳಲ್ಲಿವೆ. ಆನೆ ಮತ್ತು ಹುಲಿಗಳಲ್ಲದೆ ಅಪಾರ

ಸಂಖ್ಯೆಯಲ್ಲಿ ಜಿಂಕೆ, ಕೃಷ್ಣಮೃಗ, ಕರಡಿ, ಚಿರತೆ, ತೋಳ, ಕಡವೆ, ಸಿಂಗಳೀಕ ಮುಂತಾದ ಪ್ರಾಣಿಗಳಿವೆ.

## 2.3 ಜಲಸಂಪನ್ಮೂಲಗಳು

**(Water resources)**

- ನೈಸರ್ಗಿಕ ಸಂಪತ್ತುಗಳಲ್ಲಿ ಜಲಸಂಪನ್ಮೂಲ ಅತ್ಯಂತ ಪ್ರಮುಖವಾದುದಾಗಿದೆ. ಜಲಸಂಪತ್ತುಕೃಷಿ ಚಟುವಟಿಕೆಗಳಿಗೆ ಆಧಾರ ಸ್ತಂಭವಿದ್ದಂತೆ. ಮಾನವ, ಅಸಂಖ್ಯ ಪ್ರಾಣಿ, ಪಕ್ಷಿಗಳು ಮತ್ತು ಸಸ್ಯ

ಸಂಕುಲಗಳು ಜೀವಿಸಲು ನೀರನ್ನು ಅವಲಂಬಿಸಿವೆ. ಕರ್ನಾಟಕವು ಸಾಕಷ್ಟು ಜಲಸಂಪತ್ತನ್ನುಹೊಂದಿದೆ. ಈ ಸಂಪತ್ತಿನ ವ್ಯವಸ್ಥಿತ ಮತ್ತು ಸಮರ್ಪಕ ಬಳಕೆಯಿಂದ ರಾಜ್ಯದ ಕೆಲವು ಭಾಗಗಳಲ್ಲಿಕಂಡು ಬರುತ್ತಿರುವ ನೀರಿನ ಕೊರತೆಯನ್ನು ಸರಿಪಡಿಸಬಹುದಾಗಿದೆ. ಕೃಷಿ ಉತ್ಪಾದನೆ ಮತ್ತು ಉತ್ಪಾದನಾ ಸಾಮರ್ಥ್ಯದ ಹೆಚ್ಚಳವು ಬಹುತೇಕ ನೀರಿನ ಲಭ್ಯತೆಯನ್ನು ಅವಲಂಬಿಸಿದೆ. ಕೈಗಾರಿಕೆ ಬೆಳವಣಿಗೆಗೂ ನೀರು ಅವಶ್ಯಕವಾಗಿ ಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ನೀರು ವಿದ್ಯು ತ್ ಉತ್ಪಾದನೆಯು ಪ್ರಮುಖ ಮೂಲವಾಗಿದೆ.

- ಮೂಲಗಳು:- ಎರಡು ವಿಧಗಳಿವೆ
    1. ಮೇಲ್ಮೈ ಜಲ
    2. ಅಂತರ್ಜಲ
- ಕರ್ನಾಟಕದ ಪ್ರಮುಖ ನದಿಗಳು
    1. ಕಾವೇರಿ
    2. ತುಂಗಭದ್ರ
    3. ಕೃಷ್ಣ
    4. ಮಲಪ್ರಭಾ
    5. ಘಟಪ್ರಭಾ
    6. ಹೇಮಾವತಿ
    7. ಶರಾವತಿ
    8. ಕಪಿಲ
    9. ನೇತ್ರಾವತಿ
    10. ಭೀಮ

## 2.4 ಖನಿಜ ಸಂಪನ್ಮೂಲಗಳು(Mineral resources)

ನಿಜಗಳ ಲಭ್ಯತೆ ಆರ್ಥಿಕಾಭಿವೃದ್ದಿಯ ದಿಕ್ಕನ್ನು ನಿರ್ಧರಿಸುತ್ತದೆ. ಏಕೆಂದರೆ ಖನಿಜಗಳು ಔದ್ಯಮಿಕ ಮತ್ತು ಕೃಷಿ ಪ್ರಗತಿಯ ಆಧಾರ ಸ್ತಂಭಗಳು, ಖನಿಜಗಳು ಕೈಗಾರಿಕೆಗಳಿಗೆ ಅವಶ್ಯವಾದ ಸಂಪನ್ಮೂಲಗಳನ್ನು ಪೂರೈಸುತ್ತವೆ. ಖನಿಜಗಳಲ್ಲಿ ಸಮೃದ್ಧವಾಗಿರುವ ನಾಡು ಅವುಗಳನ್ನುವ್ಯವಸ್ಥಿತವಾಗಿ ಮತ್ತು ಸಮರ್ಪಕವಾಗಿ ಬಳಸಿಕೊಂಡು ತೀವ್ರ ಆರ್ಥಿಕಾಭಿವೃದ್ಧಿಯನ್ನು ಸಾಧಿಸುವುದುಸಾಧ್ಯವಿದೆ. ಕರ್ನಾಟಕವು ಅಪಾರವಾದ ಖನಿಜ ಸಂಪತ್ತುಗಳನ್ನು ಹೊಂದಿದೆ. ಕೆಲವು ಖನಿಜಗಳುಹೇರಳ ಪ್ರಮಾಣದಲ್ಲಿ ಲಭ್ಯವಿದ್ದರೆ, ಕೆಲವು ಖನಿಜಗಳು ಕಡಿಮೆ ಪ್ರಮಾಣದಲ್ಲಿ ಲಭ್ಯವಿವೆ. ರಾಜ್ಯವುಆರ್ಥಿಕ ಮೌಲ್ಯವು ಸುಮಾರು 40 ಖನಿಜ ನಿಕ್ಷೇಪಗಳನ್ನು ಹೊಂದಿದ್ದು, ಇವು ರಾಜ್ಯಾದ್ಯಂತ ಒಂದೇ ಸಮನಾಗಿ ಹಂಚಿಕೆಯಾಗಿಲ್ಲ. ಹೆಚ್ಚಿನ ಖನಿಜ ನಿಕ್ಷೇಪಗಳು

ಬಳ್ಳಾರಿ, ಶಿವಮೊಗ್ಗ, ಬೆಳಗಾವಿ ವಲಯಗಳಲ್ಲಿ ಹಾಗೂ ಧಾರವಾಡದ ಕೆಲ ಭಾಗಗಳಲ್ಲಿ ಕೇಂದ್ರೀಕೃತವಾಗಿವೆ. ರಾಜ್ಯದಲ್ಲಿ ಕಬ್ಬಿಣ ಮ್ಯಾಂಗನೀಸ್,, ಕ್ರೋಮೈಟ್, ಸಿಲಿಕ, ಸುಣ್ಣದಕಲ್ಲು ಮುಂತಾದ ಖನಿಜಗಳು

ಹೇರಳವಾಗಿ ಲಭ್ಯವಿವೆ. ಸೀಸ, ಗಂಧಕ, ತಾಮ್ರ, ಅಭ್ರಕ ಮುಂತಾದ ಖನಿಜಗಳು ಸ್ವಲ್ಪ ಪ್ರಮಾಣದಲ್ಲಿಲಭ್ಯವಿವೆ. ಭಾರತದಲ್ಲಿ ಕರ್ನಾಟಕವು ಚಿನ್ನವನ್ನು ಉತ್ಪಾದಿಸುವ ಏಕೈಕ ರಾಜ್ಯವಾಗಿದೆ.

1.ಚಿನ್ನ

2. ಬೆಳ್ಳಿ

3. ಕಬ್ಬಿಣದ ಅದಿರು

4. ಮ್ಯಾಂಗನೀಸ್

5.ಕ್ರೋಮೈಟ್

6.ಬಾಕ್ಸೈಟ್

7.ತಾಮ್ರ

## 2.5 ಇಂಧನ ಸಂಪನ್ಮೂಲಗಳು (Energy resources)

ಇಂಧನ ಅಥವಾ ಶಕ್ತಿಯು ಆರ್ಥಿಕ ಅಭಿವೃದ್ಧಿ ಚಟುವಟಿಕೆಯ ಪ್ರಾಣವಾಯು ಇದ್ದಂತೆ. ಅದು ಆರ್ಥಿಕ ಅಭಿವೃದ್ಧಿಯನ್ನು ಮುಂದುವರಿಸಿಕೊಂಡು ಹೋಗಲು ಮತ್ತು ಜೀವನದ ಮೂಲ

ಸೌಲಭ್ಯಗಳನ್ನು ಕಲ್ಪಿಸಲು ಬೇಕಿರುವ ಅತ್ಯಂತ ಅವಶ್ಯದ ಮೂಲ ಸಂಪನ್ಮೂಲವಾಗಿದೆ. ಇಂಧನವುಆರ್ಥಿಕ ಅಭಿವೃದ್ಧಿಯ ಬಹುದೊಡ್ಡ ಪ್ರಚೋದಕವಾಗಿರುತ್ತದೆ ಹಾಗು ಅದು ಇಲ್ಲದೆ ಪ್ರಗತಿಯ ಚಿತ್ರಗಳುಉರುಳಲಾರವು.

- ಇಂಧನದ ಮೂಲಗಳು **(Sources of energy)**

  ಇಂಧನವನ್ನು ವಿವಿಧ ಮೂಲಗಳಿಂದ ಉತ್ಪಾದಿಸಲಾಗುತ್ತಿದೆ. ಅವುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಅವುಗಳೆಂದರೆ;

  **1, ವಾಣಿಜ್ಯ ಮೂಲಗಳು (Commercial sources)**

  ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ, ಜಲ ವಿದ್ಯುತ್ ಇತ್ಯಾದಿಗಳು ಇಂಧನದ ಮೂಲಗಳಾಗಿವೆ

  **2.ವಾಣಿಜ್ಯೇತರ ಮೂಲಗಳು:-** ಉರುವಲು ಕಟ್ಟಿಗೆ ದನಕರುಗಳು,ಕೃಷಿಯ ಕಲ್ಮಶ.

  **3.ಹೊಸ ಮೂಲಗಳು:-** ಸೂರ್ಯನ ಬೆಳಕು, ಗಳಿ,ಸಮುದ್ರದ ಅಲೆಗಳು,ಅಣುಶಕ್ತಿ.

    1. ಕಲ್ಲಿದ್ದಲು
    2. ಜಲವಿದ್ಯುತ್

- ಶಿವನ ಸಮುದ್ರ ಜಲ ವಿದ್ಯುತ್ ಯೋಜನೆ
- ಶಿಂಷಾ. ಜಲ ವಿದ್ಯುತ್ ಯೋಜನೆ
- ಶರಾವತಿ ಜಲ ವಿದ್ಯುತ್ ಯೋಜನೆ

- ಕಾಳಿ ನದಿ ಜಲ ವಿದ್ಯುತ್ ಯೋಜನೆ
- ಭದ್ರಾ ಜಲ ವಿದ್ಯುತ್ ಯೋಜನೆ
- ವಾರಾಹಿ ಜಲ ವಿದ್ಯುತ್ ಯೋಜನೆ

3. ಅಣುಶಕ್ತಿ.
4. ಸೌರಶಕ್ತಿ
5. ಪವನ ಶಕ್ತಿ
6. ಡೀಸಲ್

**Chapter-2**

ಕರ್ನಾಟಕದಲ್ಲಿ ಮಾನವ ಸಂಪನ್ಮೂಲ

- ಪೀಠಿಕೆ
- ಜನ ಸಂಖ್ಯೆ ಸಂಯೋಜನೆ
- ಜನಸಂಖ್ಯಾ ಬೆಳವಣಿಗೆ ಗೆ ಕಾರಣಗಳು
- ಕರ್ನಾಟಕದಲ್ಲಿ ದೇಶಿ ಮತ್ತು ತಲಾ ಉತ್ಪನ್ನ

- ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ

- ಪೀಠಿಕೆ:- ಕರ್ನಾಟಕದಲ್ಲಿ ಜನಸಂಖ್ಯೆಯು ತೀವ್ರಗತಿಯಲ್ಲಿ ಬೆಳೆಯುತ್ತಿದೆ. ರಾಜ್ಯವು ಎದುರಿಸುತ್ತಿರುವ ಮುಖ್ಯ ವಾದ ಸಮಸ್ಯೆಗಳಲ್ಲಿ ಜನಸಂಖ್ಯೆಯ ಹೆಚ್ಚಳವೂ ಒಂದಾಗಿದೆ. 2011ರ ಜನಗಣತಿಯ ಪಕಾರ ಭಾರತದಲ್ಲಿ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯವೆಂದರೆ ಉತ್ತರಪ್ರದೇಶ, ನಂತರದ ಸ್ಥಾನಗಳನ್ನು ಪಡೆದ ರಾಜ್ಯಗಳೆಂದರೆ ಕ್ರಮವಾಗಿ ಮಹಾರಾಷ್ಟ್ರ, ಬಿಹಾರ, ಪಶ್ಚಿಮಬಂಗಾಳ. ಆಂಧವದೇಶಆಂಧವದೇಶ, ಮಧ್ಯಪ್ರದೇಶದ, ತಮಿಳುನಾಡು ಮತ್ತು ರಾಜಸ್ಥಾನ, ಕರ್ನಾಟಕವು ದೇಶದಲ್ಲಿ ಜನಸಂಖ್ಯೆಯ ಗಾತ್ರದಲ್ಲಿ 9 ನೆಯಿ  ಸ್ಥಾನ ಪಡೆದಿದೆ. 2011ರ ಜನಗಣತಿಯ ವರದಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ

**6,10,95,297 ಆಗಿದೆ (21ರಲ್ಲಿ 5,28,50,704). ಇದರಲ್ಲಿ 3,09,66,657 ಪುರುಷರು ಹಾಗೂ 3,01,28,640 ಮಹಿಳೆಯರು. ಒಟ್ಟು ಜನಸಂಖ್ಯೆಯ ಶೇ. 61.33ರಷ್ಟು ಅಂದರೆ 374.69 ಲಕ್ಷ ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿದ್ದರೆ, ಶೇ. 38.67 ಭಾಗ ಅಂದರೆ 236.25 ಲಕ್ಷ ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. 2001ರಲ್ಲಿ ಚ. ಕಿ.ಮೀ.ಗೆ 275ರಷ್ಟಿದ್ದ ಜನಸಾಂದ್ರತೆ 2011ರಲ್ಲಿ 319ಕ್ಕೇರಿದ್ದು, ಬೆಂಗಳೂರು ನಗರ ಜಿಲ್ಲೆಯು ಅತೀ ಜನಭರಿತ ಹಾಗೂ ಜನಸಾಂದ್ರತೆಯ ಜಿಲ್ಲೆ ಎನಿಸಿಕೊಂಡಿದೆ.ಕೊಡಗು ಜಿಲ್ಲೆಯು ಅತೀ ಕಡಿಮೆ ಜನಭರಿತ ಜಿಲ್ಲೆಯಾಗಿದ್ದರೆ, ಗುಲ್ಬರ್ಗ ಜಿಲ್ಲೆಯು ಅತ ಹೆಚ್ಚುಜನಸಾಂದ್ರತೆ ಜಿಲ್ಲೆಯಾಗಿದೆ. 2001ರಲ್ಲಿ 964 ರಷ್ಟಿದ್ದ ಲಿಂಗ ಪ್ರಮಾಣವು 2011ರಲ್ಲಿ 973ಕ್ಕೇರಿದೆ. 2001ರಲ್ಲಿ ಒಟ್ಟಾರೆ ಶೇ. 66.64ರಷ್ಟಿದ್ದ ರಾಜ್ಯದ**

ಸಾಕ್ಷರತೆಯ ಪ್ರಮಾಣವು 2011ರಲ್ಲಿ ಶೇ. 75.30ಕ್ಕೇರಿದೆ.

- ಜನ ಸಂಖ್ಯೆ ಸಂಯೋಜನೆ:-

1. ಲಿಂಗಾನುಪಾತ
2. ಗ್ರಾಮೀಣ ಮತ್ತು ನಗರ ಸಂಯೋಜನೆ
3. ಜನಸಾಂದ್ರತೆ
4. ಸಾಕ್ಷರತಾ ದರ
5. ಜೀವನ ನಿರೀಕ್ಷೆ
6. ಜಿಲ್ಲಾವಾರು ಜನಸಂಖ್ಯೆ
7. ಜನನ ಮತ್ತು ಮರಣ ಪ್ರಮಾಣ

- ಜನಸಂಖ್ಯೆಯ ತೀವ್ರ ಬೆಳವಣಿಗೆಗೆ ಕಾರಣಗಳು

1. ಮರಣ ಪ್ರಮಾಣದ ಇಳಿಕೆ

1. ಸಾಂಕ್ರಾಮಿಕ ರೋಗಗಳ ಹತೋಟಿ

2. ಬೀಕರ ಬರಗಾಲಗಳ ಹತೋಟಿ

3. ವೈದ್ಯಕೀಯ ಸೇವೆಗಳ ವಿಸ್ತರಣೆ

4. ತಗ್ಗಿದ ಶಿಶುಮರಣ ಪ್ರಮಾಣ

5. ಮಲೇರಿಯ, ವಿಷಮಶೀತ ಜ್ವರಗಳ ನಿಯಂತ್ರಣ

6. ಶಿಕ್ಷಣ ಸೌಲಭ್ಯದ ವಿಸ್ತರಣೆ

2. ಜನನ ಪ್ರಮಾಣದ ಏರಿಕೆಗೆ ಕಾರಣಗಳು

1. ಆರ್ಥಿಕ ಅಂಶಗಳು

1. ಕೃಷಿ ಪ್ರಾಧಾನ್ಯತೆ

2. ಬಡತನ

3. ನಿಧಾನಗತಿಯ ನಗರೀಕರಣ

4. ಹಳ್ಳಿಗಳ ಪ್ರಾಧಾನ್ಯತೆ

5. ಕುಟುಂಬ ಯೋಜನ ಅಳವಡಿಕೆಗೆ ಹಿಂಜರಿಕೆ

2. ಸಾಮಾಜಿಕ ಅಂಶಗಳು

1. ಸಾರ್ವತ್ರಿಕ ವಿವಾಹ

2. ಚಿಕ್ಕ ವಯಸ್ಸಿನಲ್ಲಿ ವಿವಾಹ

3. ಧಾರ್ಮಿಕ ಮತ್ತು ಸಾಮಾಜಿಕ ಮೌಢ್ಯಗಳು

4, ಅವಿಭಕ್ತ ಕುಟುಂಬ

5. ಅನಕ್ಷರತೆ

6. ಬಹುಪತ್ನಿತ್ವ

3. ಭೌಗೋಳಿಕ ಅಂಶಗಳು

4. ಜನಸಂಖ್ಯಾ ಶಿಕ್ಷಣದ ಕೊರತೆ

5. ರಾಜಕೀಯ ಅಂಶಗಳು

- ಕರ್ನಾಟಕದಲ್ಲಿ ದೇಶಿ ಮತ್ತು ತಲಾ ಉತ್ಪನ್ನ:-
  1. ರಾಜ್ಯಾದಾಯ
  2. ತಲಾದಾಯ

**1.ರಾಜ್ಯಾದಾಯ:-(State Domestic Product)**

ಒಂದು ರಾಜ್ಯವು ಅಭಿವೃದ್ಧಿ ಹೊಂದುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ಆಳೆಯಲುಲಭ್ಯವಿರುವ ಮಾನದಂಡಗಳಲ್ಲಿ ರಾಜ್ಯಾದಾಯವು ಅತ್ಯಂತ ಪ್ರಮುಖವಾದುದು. 1951ರ ಜಾರಿಯಾದ ಆರ್ಥಿಕ ಯೋಜನೆಗಳ ಫಲವಾಗಿ ಕರ್ನಾಟಕದಲ್ಲಿ ವ್ಯವಸ್ತಿತವಾದ ಆನ

ಯೋಜನೆಗಳ ಅನುಷ್ಠಾನಗೊಂಡವು. ಆರ್ಥಿಕತೆಯ ವಿವಿಧ ರಂಗಗಳಲ್ಲಿ ಗಣನೀಯ ಪ್ರಗತಿ ಸಾಧಿಸಲಾಯಿತು. ವ್ಯವಸ್ಥಿತವಾದ ಮತ್ತು ವ್ಯಾಪಕವಾದ ಅಭಿವೃದ್ಧಿಯ ಚಟುವಟಿಕೆಗಳ ಕಾರಣದಿಂದಾಗಿ ಕರ್ನಾಟಕದ ರಾಜ್ಯದಯವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಯಿತು.

ರಾಜಾದಾಯದ ಹೆಚ್ಚಳವು ಅಭಿವೃದ್ಧಿ ಮಾಪನದ ಅಳತೆಗೋಲು ಎಂಬುದರಲ್ಲಿ ಎರಡು ಮಾತಿಲ್ಲ

**2. ಕರ್ನಾಟಕದ ತಲಾದಾಯ**

**(Percapita income)**

ರಾಜ್ಯಾದಾಯವನ್ನು ರಾಜ್ಯದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದರೆ ತಾಲಾದಯ ಲಭ್ಯವಾಗುತ್ತದೆ, ಅಂದರೆ ತಲಾದಾಯ ಎಂಬುದು ವಿವಿಧ ಜನರ ಸರಾಸರಿ ಆಗಾಯವಾಗಿದೆ. ಈಆದಾಯವು ರಾಜ್ಯದ ಪ್ರಗತಿಯ ನೈಜ ಚಿತ್ರಣವನ್ನು ನೀಡುತ್ತದೆ, ಕರ್ನಾಟಕದ ಸಲಾದಾಯವು ಕಾಲಾನಂತರದಲ್ಲಿ ಹೆಚ್ಚಿದೆಯಾದರೂ ಜನಸಂಖ್ಯೆಯ ಏರಿಕೆಯಿಂದಾಗಿ ತಲಾದಾಯ ಗಣನೀಯ ಹೆಚ್ಚಳವಾಗಿರುವುದಿಲ್ಲ. ಆದರೂ ಸಹ

ಪ್ರಸ್ತುತ ಬೆಲೆಗಳಲ್ಲಿ ತಲಾದಾಯ ಸಾಕಷ್ಟು ಏರಿಕೆಯಾಗಿದೆ.

5. **ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ(Human development in Karnataka)**

ಯಾವುದೇ ಯೋಜನೆ ಅಥವಾ ಅಭಿವೃದ್ಧಿ ಧೋರಣೆಗಳ ಮೂಲ ಉದ್ದೇಶ ಮಾನವಆಭಿವೃದ್ಧಿಯನ್ನು ಸಾಧಿಸುವುದಾಗಿರುತ್ತದೆ. ಈ ಮಾನವ ಅಭಿವೃದ್ಧಿ ಎಂದರೆ "ಜನರ ಆಯ್ಕೆಯಪರಿಧಿ ಯನ್ನ ವಿಸ್ತರಿಸುವ ಪ್ರಕ್ರಿಯೆ'ಯಾಗಿರುತ್ತದೆ. ಅಂದರೆ ಜನರ ಆಯ್ಕೆಗಳನ್ನು ವಿಸ್ತರಿಸುವಮತ್ತು ಜೀವನ ಮಟ್ಟವನ್ನು ಹೆಚ್ಚಿಸುವ ಪ್ರಕ್ರಿಯ ಮಾನವ ಅಭಿವೃದ್ಧಿಯಾಗಿರುತ್ತದೆ. ಇದರಲ್ಲಿ ತುಂಬಾ ಪ್ರಮುಖವಾದುವುಗಳು ಎಂದರೆ ದೀರ್ಘ ಮತ್ತು ಆರೋಗ್ಯವಂತ ಜೀವನ ನಡೆಸುವುದು,ಶಿಕ್ಷಿತರಾಗಿರುವುದು ಮತ್ತು ಒಂದು ಉತ್ತಮ ಜೀವನಮಟ್ಟವನ್ನು ಸಾಗಿಸುವುದು.

- ಮಾನವ ಆಭಿವೃದ್ಧಿ ಸಾಧನೆಯ ಶ್ರೇಣಿ

**ಸೂಚಿ (HDi) ಮೌಲ್ಯದ ಆಧಾರದ ಮೇಲೆ ವಿವಿಧ ದೇಶಗಳು**
**ಮತ್ತು ರಾಜ್ಯಗಳನ್ನು ವಿವಿಧ ಗುಂಪುಗಳಲ್ಲಿ ಈ ಕೆಳಗಿನಂತೆ ಸೇರ್ಪಡೆಗೊಳಿಸಲಾಗುತ್ತದೆ.**
**1. ಅತ್ಯುನ್ನತ ಮಾನವ ಅಭಿವೃದ್ಧಿ (Very high human development) : HDI ಮೌಲ್ಯ0.788 ರಿಂದ 0.938 ಹೊಂದಿರುವ ದೇಶಗಳು ಮತ್ತು ರಾಜ್ಯಗಳು ಈ ಗುಂಪಿಗೆ ಸೇರ್ಪಡೆಗೊಳ್ಳುತ್ತವೆ.**
**2 ಉನ್ನತ ಮಾನವ ಅಭಿವೃದ್ಧಿ (High human development) : HDI ಮೌಲ 0.67 ದ 0.784 ಹೊಂದಿರುವ ದೇಶಗಳು ಮತ್ತು ರಾಜ್ಯಗಳು ಈ ಗುಂಪಿನಲ್ಲಿರುತ್ತವೆ.**
**3 ಮಧ್ಯಮ ಮಾನವ ಅಭಿವೃದ್ಧಿ (Medium human development) : HDI ಮೌಲ.0.488 ರಿಂದ 0.699 ಹೊಂದಿರುವ ದೇಶಗಳು ಮತ್ತು ರಾಜ್ಯಗಳು ಈ ಗುಂಪಿನಲ್ಲಿರುತ್ತವೆ.**

4 ಕನಿಷ್ಠ ಮಾನವ ಅಭಿವೃದ್ದಿ (Low human development) : hdi ಮೌಲ್ಯ 0.140ರಿಂದ 0.470 ಹೊಂದಿರುವ ದೇಶಗಳು ಈ ಗುಂಪಿನಲ್ಲಿರುತ್ತವೆ.

ಭಾರತ ಸರ್ಕಾರದ ಯೋಜನಾ ಆಯೋಗವು 2001 ರಲ್ಲಿ ಮೊಟ್ಟ ಮೊದಲ ಬಾರಿಗೆ ರಾಷ್ಟ್ರೀಯಮಾನವ ಅಭಿವೃದ್ದಿ ವರದಿ (NHDR) ಯನ್ನು ತಯಾರಿಸಿತು. ಈ ವರದಿಯ ಪ್ರಕಾರ ರಾಷ್ಟ ಮಟ್ಟದ ಮಾನವ ಅಭಿವೃದ್ಧಿ ಅನುಸೂಚಿ (HDI) ಮೌಲ್ಯ 0.30 ರಿಂದ 0.470 ಮಟ್ಟಕ್ಕೆ ಹೆಚ್ಚಿತು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ HDI ಮೌಲ್ಯ 1981 ರ 0.346 ರಿಂದ 2001 ರ ವೇಳೆಗೆ 0.478 ಗೆ ಹೆಚ್ಚಿತು. 1981 ರಲ್ಲಿ ಕರ್ನಾಟಕದ HDI ದರ್ಜೆ (Rank) 6 ಆಗಿತ್ತು. ಇದು 2001 ರವೇಳೆಗೆ 7 ಕ್ಕೆ ಕುಸಿಯಿತು. ಈ ಅಂಕಿ ಅಂಶಗಳ ಪ್ರಕಾರ ಕರ್ನಾಟಕ ಕನಿಷ್ಠ ಮಾನವ ಅಭಿವೃದ್ಧಿಯ

ಗುಂಪಿನಲ್ಲಿತ್ತು.

2010 ರ ಮಾನವ ಅಭಿವೃದ್ಧಿ ವರದಿ (HDR) ಯ ವರ್ಗೀಕರಣದ ಮೇರೆಗೆ ಕೇರಳ ರಾಜ್ಯವು ಜಾಗತಿಕ HD] ಮೌಲದೊಂದಿಗೆ ಮಾಧ್ಯಮ ಮಾನವ ಅಭಿವದಿ ಗುಂಪಿನಲ್ಲಿತ್ತು. ಇನ್ನು ಈ ಗೂಂಪಿನಲ್ಲಿದ್ದ ಇತರ ರಾಜ್ಯಗಳೆಂದರೆ : ಪಂಜಾಬ್, ಹಿಮಾಚಲ ಪ್ರದೇಶ, ಹರ್ಯಾಣ ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ್ ಮತ್ತು ಪಶ್ಚಿಮ ಬಂಗಾಳ, ಇನ್ನುಳಿದ ಒಂಬತ್ತು
ರಾಜ್ಯಗಳಾದ ಆಂಧ್ರಪ್ರದೇಶ, ಅಸ್ಸಾಂ, ಉತ್ತರ ಪ್ರದೇಶ, ರಾಜಾಸ್ತಾನ್, ಜಾರ್ಖಂಡ್,ಮಧ್ಯಪ್ರದೇಶದ, ಛತ್ತೀಸ್‌ಘಡ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳು ಕನಿಷ್ಠ ಮಾನವ ಅಭಿವೃದ್ಧಿಯ ಗುಂಪಿನಲ್ಲಿದ್ದವು. ಅಂದರೆ ದೇಶದ ಎಲ್ಲಾ ರಾಜ್ಯಗಳು ಮಧ್ಯಮ ಇಲ್ಲವೆ ಕನಿಷ್ಟ ಮಾನವ ಅಭಿವೃದ್ಧಿ
ಗುಂಪಿನಲ್ಲಿವೆ.2005 ರ ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ವರದಿ (HDR)ಯ ಮೇರೆಗೆ ಕರ್ನಾಟಕವು0.65O HDI ಮೌಲ್ಯದೊಂದಿಗೆ ಅಖಿಲ ಭಾರತ ಮಟ್ಟಕ್ಕಿಂತ (0.621 HDI ಮೌಲ್ಯ)

ಉತ್ತಮಸ್ಥಾನದಲ್ಲಿತ್ತು. ದೇಶದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕ 7ನೇ ಸ್ಥಾನದಲ್ಲಿದ್ದರೆ ಕೇರಳ ರಾಜ್ಯವುಮೊದಲ ಸ್ಥಾನದಲ್ಲಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದ್ದು 120ನೇ ಸ್ಥಾನವಾದರೆ ಭಾರತದ್ದು

127 ನೇ ಸ್ಥಾನ, ಕರ್ನಾಟಕದ ಮಾನವ ಅಭಿವೃದ್ಧಿ ಸಾಧನೆಯು ಹೆಚ್ಚು ಕಡಿಮೆ ಈಜಿಪ್ಟ್ ದೇಶದಷ್ಟೇ

ಇದೇ 2005 ರ ವೇಳೆಯಲ್ಲಿ ಕರ್ನಾಟಕದ ಮಾನವ ಅಭಿವೃದ್ಧಿಯ ಸ್ಥಾನ ನೆರೆಯ ಪಾಕಿಸ್ತಾನ,ನೇಪಾಳ, ಭೂತಾನ್ ಮತ್ತು ಬಾಂಗ್ಲಾದೇಶಕ್ಕಿಂತ ಉತ್ತಮವಿತ್ತು.ಇತ್ತೀಚಿನ UNDPಯ 2013 ರ ಮಾನವ ಅಭಿವೃದ್ಧಿ ವರದಿಯ ಮೇರೆಗೆ ಭಾರತವು 2012ರಲ್ಲಿ 0.554 HDI ಮೌಲ್ಯದೊಂದಿಗೆ 136 ನೇ ಸ್ಥಾನದಲ್ಲಿತ್ತು. ಇದೇ ವೇಳೆಯಲ್ಲಿ ನಾರ್ವೆ ದೇಶವು 0.955 HDIಮೌಲ್ಯದೊಂದಿಗೆ ಮೊದಲ ಸ್ಥಾನದಲ್ಲಿ ಹಾಗು ೦.938 HDI ಮೌಲ್ಯದೊಂದಿಗೆ ಆಸ್ಟ್ರೇಲಿಯಾದೇಶವು ದ್ವಿತೀಯ ಸ್ಥಾನದಲ್ಲಿತ್ತು.

# Chapter -3

# ಕೃಷಿ ಅಭಿವೃದ್ಧಿ

## (DEVELOPMENT OF AGRICULTURE)

- ಕರ್ನಾಟಕ ಆರ್ಥಿಕತೆಯಲ್ಲಿ ಕೃಷಿಯ ಸ್ಥಾನ
- ಕರ್ನಾಟಕದಲ್ಲಿ ಭೂ ಸುಧಾರಣೆ
- ಕರ್ನಾಟಕದಲ್ಲಿ ಬೆಳೆ ಮಾದರಿ
- ಕರ್ನಾಟಕದಲ್ಲಿ ಕೃಷಿ ಉತ್ಪಾದಕತೆ
- ತೋಟಗರಿಕೆ ಬೆಳೆಗಳು
- ಕರ್ನಾಟಕದಲ್ಲಿ ರೇಷ್ಮೆ ಕೃಷಿ
- ಪಶುಸಂಗೋಪನೆ

**1. ಕರ್ನಾಟಕದ ಆರ್ಥಿಕತೆಯಲ್ಲಿ ಕೃಷಿಯ ಸ್ಥಾನ**

**(Place of Agriculture in Karnataka Economy)**

**ಬಹುಹಿಂದಿನ ಕಾಲದಿಂದಲೂ ಕೃಷಿ ರಾಜ್ಯದ ಪ್ರಧಾನ ಕಸುಬಾಗಿದೆ. ರಾಜ್ಯದ ಆರ್ಥಿಕ ರಚನೆಯು ಕೃಷಿಯ ಮೇಲೆ ನಿಂತಿದೆ. ಇಂದಿಗೂ ಕೃಷಿಯು ಕರ್ನಾಟಕದ ಆರ್ಥಿಕತೆಯ ಬೆನ್ನೆಲುಬುಎಂದು ಪರಿಗಣಿತವಾಗಿರುವುದರಿಂದ ಅದು ಅಭಿವೃದ್ಧಿಗೊಂಡರೆ ಮಾತ್ರ ರಾಜ್ಯಅಭಿವೃದ್ಧಿಗೊಂಡೀತು, ಇಲ್ಲವಾದರೆ ಇಲ್ಲಿ ಕೃಷಿಯನ್ನು ಅಪೇಕ್ಷಿಸಿ ರಾಜ್ಯ ಅಭಿವೃದ್ಧಿಗೊಳ್ಳುವುದುಕನಸಿನ ಮಾತೇ ಸರಿ. ಹೀಗೆ ಕೃಷಿಯು ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ.**

**1. ಕೃಷಿಯ ಪ್ರಾಮುಖ್ಯತೆ:-**

**1.ರಾಜ್ಯಾದಾಯದಲ್ಲಿ ದೊಡ್ಡ ಮಟು**

**2. ಗರಿಷ್ಟ ಉದ್ಯೋಗ**

**3. ಆಹಾರ ಪೂರೈಕೆ**

**4. ಕೈಗರಿಕಾಭಿವೃದ್ಧಿ**

5. ವಿದೇಶಿ ವ್ಯಾಪಾರಕ್ಕೆ ಕೊಡುಗೆ
6. ಸರ್ಕಾರಕ್ಕೆ ಆದಾಯ
7. , ಆಯ-ವ್ಯಯ ಪತ್ರದ ಮೇಲೆ ಪ್ರಭಾವ
8. ,ಅನುಭೋಗದಲ್ಲಿ ಕೃಷಿಯ ಮಹತ್ವ
9. ಬಂಡವಾಳ ಸಂಚಯನದ ಮೂಲ
10. ಪ್ರಾಣಿಗಲಿಗೆ ಮೇವು
11. ಬೆಲೆ ಸ್ಥಿರತೆ
12. ತೃತೀಯ ವಲಯದ ಬೆಳವಣಿಗೆ
13. . ಕೈಗಾರಿಕೋತ್ಪನ್ನಗಳಿಗೆ ಮಾರುಕಟ್ಟೆ
14. ಉತ್ತ ಮ ರಾಷ್ಟ್ರ ರಕ್ಷಣಾ ಶಕ್ತಿ
15. ರಾಜಕೀಯ ಮತ್ತು ಸಾಮಾಜಿಕ ಪ್ರಾಮುಖ್ಯತೆ.

**2. ಕರ್ನಾಟಕದಲ್ಲಿ ಭೂ ಸುಧಾರಣೆ(Land Reforms in Karnataka)**

ಕೃಷಿ ಭ್ರದ್ಧಗುಡಿಗೆ ತಾಂತ್ರಿಕ ಮುನ್ನಡೆಗಳಷ್ಟೇ ಮುಖ್ಯವಾಗಿ ಸಾಂಸ್ಥಿಕ ಸುಧಾರಣೆಗಳೂ ಆವಶ್ಯಕಹ ರು ಹಾಜರಿ ಭೂಮಾಲಿಕತ್ವ, ಒಡೆತನದ ಅಭದ್ರತೆ, ಭೂ ಹಿಡುವಳಿಗಳ

ಸ್ವರೂಪ, ವಸೂಲಿ, ಅನಾರ್ಥಿಕ ಹಿಡುವಳಿಗಳ ಅಸ್ತಿತ್ವ ಕೃಷಿ ಭೂಮಿಯ ವಿಭಜನೆ ಮತ್ತು ಆದ್ರೀಕರಣ

ಮುಂತಾದ ಸಾಂಸ್ಥಿಕ ಅಂಶಗಳು ಕೃಷಿ ಉತ್ಪಾದನೆ ಮತ್ತು ಪ್ರಗತಿ ಮೇಲೆ ದುಷ್ಪರಿಣಾಮ ಬೀರುತ್ತವೆ.ದೋಷಪೂರಿತ ಸಾಂಸ್ಥಿಕ ವ್ಯವಸ್ಥೆಯು ಕೃಷಿ ಬೆಳವಣಿಗೆಗೆ ತಡೆಯೊಡ್ಡುತ್ತಿದೆ. ಈ ಹಿನ್ನೆಲೆಯಲ್ಲಿಸಾರಿಕ ದೋಷಗಳ ನಿವಾರಣೆಯಾಗದ ಹೊರತು ಕೃಷಿ ಪ್ರಗತಿ ಅಸಾಧ್ಯದ ಮಾತು. ಅಂತೃಹಸಾಂಸ್ಥಿಕ ಸುಧಾರಣೆಗಳಲ್ಲಿ ಅವರು ತಿಳಿಸಿದರು.

- ಕ್ರಮಗಳು:-
    1. ಜಮೀನ್ದಾರಿ ಪದ್ಧತಿಯ ನಿರ್ಮೂಲನೆ
    2. ಗೇಣಿ ಪದ್ಧತಿಯ ಸುಧಾರಣೆ
- ಗೇಣಿ  ನಿಯಂತ್ರಣ
- ಹಿಡುವಳಿ ಭದ್ರತೆ
- ಭೂ ಒಡೆತನದ ಹಕ್ಕು
    3. ಭೂ ಹಿಡುವಳಿ ಯ ಮೇಲೆ ಗರಿಷ್ಟ ಮಿತಿ ಹೇರಿಕೆ
    4. ಹಿಡುವಳಿ ಘನೀಕರಣ

- ಭೂ ಸುಧರಣಾ ಕಾರ್ಯಕ್ರಮದ ವಿಮರ್ಶೆ
    1. ಕಾನೂನಿನ ತೊಡಕುಗಳು
    2. ರಾಜಕೀಯ ಇಚ್ಛಾ ಶಕ್ತಿಯ ಕೊರತೆ
    3. ಅಧಿಕಾರ ಷಾಹಿಯ ಉಪಕ್ಷತೆ
    4. ಒತ್ತಡದ ಅಭಾವ
    5. ಭೂ ದಾಖಲೆಗಳ ಅಭಾವ

**3. ಕರ್ನಾಟಕದಲ್ಲಿ ಬೆಳೆ ಮಾದರಿ(Cropping Pattern in Karnataka):-** ಕರ್ನಾಟಕದ ಎಲ್ಲಾ ಭಾಗಗಳಲ್ಲೂ ಒಂದೇ ರೀತಿಯ ಹವಾಗುಣ ಮತ್ತು ಮಣ್ಣಿನ ವಿಧಗಳಿಲ್ಲ.ರಾಜ್ಯದ  ವಿವಿಧ ಭಾಗಗಳಲ್ಲಿ ವಿಭಿನ್ನಹವಾಗುಣ ಪರಿಸ್ಥಿತಿಗಳು ಮತ್ತು ಮತ್ತು ಕೊಂಡು ಬರುತ್ತದೆ,

ಅಯಾ ಪ್ರದೇಶದಲ್ಲಿ ದೊರಕುವ ಮಣ್ಣು ಆದುನ ಫಲವತ್ತತೆ, ಅಲ್ಲಿ ಬೀಳುವ ಮಳೆ ಮುಂತಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬೆಳೆಯಬೇಕಾದ ಬೆಳೆಯನ್ನು ನಿರ್ಧರಿಸಲಾಗುತ್ತದೆ.ರಾಜ್ಯಾದಲ್ಲಿ ಬೆಳೆಯುವ ಬೆಳೆಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದು,**(a)** ಆಹಾರ ಬೆಳೆಗಳು, **(b)** ಆಹಾರೇತರ ಬೆಳೆಗಳು,

ಆಹಾರದ ಬೆಳೆಗಳಲ್ಲಿ ಏಕದಳ ಮತ್ತು ದ್ವಿದಳ ಧಾನ್ಯಗಳು ಎಂದು ಎರಡು ವಿಧಗಳಿವೆ. ಅಕ್ಕಿ, ರಾಗಿ, ಜೋಳ, ಗೋಧಿ, ಸಜ್ಜೆ, ನವಣೆ

ಮುಂತಾದವುಗಳು ಪ್ರಮುಖವಾದ ಏಕದಳ ಧಾನ್ಯಗಳಾಗಿವೆ, ತೊಗರಿ, ಕಡ, ಉದ್ದು ಅವರಮೊದಲಾದವುಗಳು ಪ್ರಮುಖವಾದ ದ್ವಿದಳ ಧಾನ್ಯಗಳಾಗಿವೆ. ಕರ್ನಾಟಕವು ದೇಶದ ಒಟ್ಟುಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಶೇ. 5.59 ಭಾಗವನ್ನು ಹೊಂದಿದೆ.ಆಹಾರೇತರ ಬೆಳೆಗಳನ್ನು ವಾಣಿಜ್ಯ ಬೆಳೆಗಳೆಂದೂ ಕರೆಯುತ್ತಾರೆ. ಕಬ್ಬು, ಹತ್ತಿ,

ಹೊಗೆಸೊಪ್ಪು, ಶುಂಠಿ, ಎಣ್ಣೆ ಕಾಳುಗಳು ಮುಂತಾದುವು ಪ್ರಮುಖವಾದ ಆಹಾರೇತರಬೆಳೆಗಳಾಗಿವ. ಕಾಫಿ, ಚಹ, ತೆಂಗು, ಅಡಿಕೆ, ಕಿತ್ತಳೆ, ಮಾವು, ಬಾಳೆ, ದ್ರಾಕ್ಷಿ, ಏಲಕ್ಕಿ, ಗೋಡಂಬಿಮುಂತಾದವು ತೋಟದ ಬೆಳೆಗಳಾಗಿವೆ. ರಾಜ್ಯದಲ್ಲಿ ಸುಮಾರು 17.64 ಲಕ್ಷ ಹೆಕ್ಟೇರುಗಳಷ್ಟು

ಪ್ರದೇಶವು ತೋಟಗಾರಿಕೆ ಬೆಳೆಗಳಿಂದ ವೃತವಾಗಿದೆ. ರಾಜ್ಯದಲ್ಲಿ ಈ ಆಹಾರ ಮತ್ತು ಹಾರೇತರ ಬೆಳೆಗಳಲ್ಲಿ ಕೆಲವು ಬೆಳೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆದರೆ, ಕೆಲವು ಬೆಳೆಗಳನ್ನು ಕಡಿಮೆಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ.

1.ಮುಂಗಾರು ಬೆಳೆಗಳು :- ಖಾರೀಫ್ ಎಂತಲೂ ಕರೆಯುತ್ತಾರೆ ಮಳೆಗಾಲದಲ್ಲಿ ಬೆಳೆ ಬೆಳೆದು ಬಿತ್ತಿನೆ ಮಾಡಿ ಚಳಿಗಾಲದಲ್ಲಿ ಕಟಾವು.

2. ಹಿಂಗಾರು ಬೆಳೆಗಳು:- ರಬಿ ಎಂತಲೂ ಕರೆಯಲಾಗುತ್ತದೆ ಚಳಿಗಾಲದಲ್ಲಿ ಬೆಳೆ ಬೆಳೆದು ಬೇಸಿಗೆ ಅವಧಿಯಲ್ಲಿ ಕಟಾವು ಮಾಡಲಾಗುತ್ತದೆ.

ಕರ್ಣಕದಲ್ಲಿ ಬೆಳೆಯುವ ಪ್ರಮುಖ ಬೆಳೆಗಳು

- ಆಹಾರ ಬೆಳೆಗಳು
  1. ಭತ್ತ
  2. ಜೋಳ
  3. ಗೋಧಿ
  4. ಮೆಕ್ಕೆ ಜೋಳ
  5. ಸಜ್ಜೆ
- ವಾಣಿಜ್ಯ ಬೆಳೆಗಳು
  1. ಕಬ್ಬು

2. ಹತ್ತಿ
3. ತಂಬಾಕು
4. ಎಣ್ಣೆ ಕಾಳುಗಳು
5. ಕಾಫೀ
6. ಚಹಾ
7. ಅಡಿಕೆ
8. ತೆಂಗು

4. ಕರ್ನಾಟಕದಲ್ಲಿ ಕೃಷಿ ಉತ್ಪಾದಕತೆ

**Agricultural Productivity in Karnataka)**

ಕರ್ನಾಟಕ ಕೃಷಿ ಪ್ರಧಾನ ರಾಜ್ಯ. ಇಲ್ಲಿಯ ಜನರ ಮುಖ್ಯ ಕಸುಬು ಕೃಷಿಯೇ ಆಗಿದೆ. ಇತ್ತೀಚಿಗೆ ತೀರಾ ಹಿಂದುಳಿದಿದ್ದು ಅದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೃಷಿಗಿರುವ ಅನೇಕ ಸಮಸ್ಯೆಗಳನ್ನು ಬಹಳ ಗಂಭೀರವಾದ ಸಮಸ್ಯೆ ಅಂದರೆ ಕಡಿಮೆ ಉತಉತ್ಪಾದಯ ಸಮಸ್ಯೆಯಾಗಿದೆ. ಉತ್ಪಾದಕತೆ ಎಂದರೆ ಉತ್ಪಾದನಾ ಸಾಮರ್ಥವಾಗಿದ್ದು ಇದನ್ನು ಎಕರೆವಾರು

ಉತ್ಪಾದಕತೆ ಮತ್ತು ಶ್ರಮವಾರು ಉತ್ಪಾದಕತೆಯ ಆಧಾರದ ಮೇಲೆ  ರಾಜ್ಯದಲ್ಲಿ ಭೂಮಿಯ ಉತ್ಪಾದಕತೆಯು ಎಕರೆವಾರು ಉತ್ಪಾದಕತೆ ಮತ್ತು ಎರಡು ವಿಧಾನಗಳಲ್ಲಿ ತುಂಬಾ ಕಡಿಮೆಯಿದೆ. ಅಂದರೆ ರಾಜ್ಯದಲ್ಲಿ ಪ್ರತೀ ಎಕರೆಅವುಗಳಲ್ಲಿನ ಉತ್ಪಾದಿಸಲಾಗುವ ಆಹಾರ ಸಾಮಗ್ರಿಗಳ ಪ್ರಮಾಣ ತುಂಬಾ ಕಡಿಮೆ ಇದೆ.ದಅದೇ ರೀತಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವ ಪ್ರತೀ ಕಾರ್ಮಿಕ ಉತ್ಪಾದಕ ಪ್ರತಿ ಆದಾರದ ಮೇಲೆ ಹೊಲಿಸಿ ಕೊಂಡರೆ ಕಡಿಮೆ ಇರುತ್ತದೆ. ರಾಜ್ಯದ ಶೇ. 50ಕ್ಕೂ ಅಧಿಕ ಜನರು ಜಿವನೋಪಾಯಕ್ಕೆ ಕೃಷಿಯನ್ನೇ ಅವಲಂಬಿಸಿದ್ದರೂ ಫಲಿತಾಂಶ ಮಾತ್ರ ಅಷ್ಟೇನೂ ಪ್ರಗತಿದಾಯಕವಾಗಿಲ್ಲ. ಕರ್ನಾಟಕದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 1970-71 ರಲ್ಲಿ57.46 ಲಕ್ಷ ಟನ್ನುಗಳಿದ್ದಿತು. ಇದು 2013-14ರ ಸಾಲಿನಲ್ಲಿ 131 ಲಕ್ಷ ಟನ್‌ಗಳಿಗೆ ಹೆಚ್ಚಿತು.ಉತ್ಪಾದನಾ ಗುರಿಗೂ ಹಾಗೂ ಸಾಧನೆಗೂ ಭಾರೀ ವ್ಯತ್ಯಾಸಗಳು ಕಂಡುಬರುತ್ತವೆ. ಅಲ್ಲದೆ ಪ್ರತಿ ಹೆಕ್ಟೇರ್‌ನಲ್ಲಿ ಉತ್ಪಾದನೆಯಾಗುವ ಇಳುವರಿ ಕೂಡ ಕಡಿಮೆ ಇರುತ್ತದೆ.

ಗಾಹರಣೆಗೆ ರಾಜ್ಯದಲ್ಲಿ ಪ್ರತಿ ಹೆಕ್ಟೇರ್‌ಗೆ ಉತ್ಪಾದನೆಯಾಗುವ ಆಹಾರಧಾನ್ಯಗಳ ಇಳುವರಿ13.0 ಕಿಂಟಲ್ ಆಗಿದ್ದರೆ ಅದು ಪಂಜಾಬ್‌ನಲ್ಲಿ 40.2 ಕ್ವಿಂಟಾಲ್ ಆಗಿರುತ್ತದೆ.

ಈ ಕಡಿಮೆ ಉತ್ಪಾದಕತೆಗೆ ಕಾರಣಗಳು

1, ಸಾಮಾಜಿಕ ಕಾರಣಗಳು

- . ಸಾಮಾಜಿಕ ವಾತಾವರಣ
- ಅನಕ್ಷರತೆ
- ಅಜ್ಞಾನ
- ಮೌಢ್ಯತೆ
- ಅತಾರ್ಕಿಕ ನಡವಳಿಕೆ
- ಜಾತಿ ಪದ್ಧತಿ

2. ನೈಸರ್ಗಿಕ ಕಾರಣಗಳು

- ಅನಿಶ್ಚಿತ ಮಳೆ
- ನಿಸರ್ಗದ ಪ್ರಭಾವ
- ಭೂ ಸವೆತ
- ಫಲವತ್ತತೆಯ ನಷ್ಟ

- ಕ್ರಿಮಿಕೀಟಗಳು ಮತ್ತು ಬೆಳಿರೋಗಗಳು
- . ಅರಣ್ಯನಾಶ
- ನೈಸರ್ಗಿಕ ಪ್ರಕೋಪಗಳು

3. ತಾಂತ್ರಿಕ ಕಾರಣಗಳು

- ಹಳೆಯ ಮತ್ತು ಅವೈಜ್ಞಾನಿಕ ಕೃಷಿ ಪದ್ಧತಿಗಳು
- ನೀರಾವರಿ ಸೌಲಭ್ಯಗಳ ಕೊರತೆ
- ರಸಗೊಬ್ಬರಗಳ ಕೊರತೆ
- ಉತ್ತಮ ಬಿತ್ತನೆ ಬೀಜಗಳ ಅಭಾವ
- ಕ್ರಿಮಿನಾಶಗಳ ಕೊರತೆ

4.ಸಾಂಸ್ಥಿಕ ಕಾರಣಗಳು

- ಸಣ್ಣ ಹಿಡುವಳಿಗಳು
- ಆಧಿಕ ಒತ್ತಡ

5 ಆರ್ಥಿಕ ಕಾರಣಗಳು

- ಸಾಲ ಸೌಲಭ್ಯದ ಕೊರತೆ
- ಮಾರುಕಟ್ಟೆ ಸೌಲಭ್ಯದ ಕೊರತೆ
- ಉತ್ತೇಜಕಗಳ ಅಭಾವ

- ವೈಜ್ಞಾನಿಕ ಬೆಲೆಯ ಅಭಾವ
- ಗ್ರಾಮೀಣ ಋಣಭಾರ

* ಉತ್ಪಾದಕತೆಯನ್ನು ಸುಧಾರಿಸುವ ಕ್ರಮಗಳು

1. ಭೂ ಸುಧಾರಣೆಯ ಸಮರ್ಪಕ ಅನುಷ್ಠಾನ

2. ನೀರಾವರಿ ಸೌಲಭ್ಯದ ವಿಸ್ತರಣೆ

3. ಉತ್ತಮ ಬಿತ್ತನೆ ಬೀಜಗಳ ಪೂರೈಕೆ

4. ರಸಗೊಬ್ಬರಗಳ ಪೂರೈಕೆ

5. ಸಸ್ಯ ಸಂರಕ್ಷಣೆ

6. ಯಾಂತ್ರೀಕೃತ ಬೇಸಾಯ

7. ಸಾಲ ಸೌಲಭ್ಯಗಳು

8. ಮಾರುಕಟ್ಟೆ ಸೌಲಭ್ಯ

9, ಉತ್ತೇಜಕಗಳು

10. ಉತ್ತಮ ನಿರ್ವಹಣೆ

11. ಕೃಷಿ ಸಂಶೋಧನೆ

12. ದೊಡ್ಡ ಹಿಡುವಳಿಯ ರಚನೆ

13. ಅನಕ್ಷರತೆಯ ನಿವಾರಣೆ

14. ಅಧಿಕ ಜನರ ವರ್ಗಾವಣೆ

15. ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ

16. ಸಾರಿಗೆ-ಸಂಪರ್ಕ ಅಭಿವೃದ್ಧಿ

17. ಭೂ ಸಾರ ಸಂರಕ್ಷಣೆ

18. ತೀಕ್ಷ್ಯ ಬೇಸಾಯಕ್ಕೆ ಪ್ರೋತ್ಸಾಹ

19. ಸಹಕಾರಿ ಬೇಸಾಯದ ಅಳವಡಿಕೆ

**6, ಕರ್ನಾಟಕದಲ್ಲಿ ರೇಷ್ಮೆ ಕೃಷಿ**

**(Seri culture in Karnataka)**

ರೇಷ್ಮೆಯು ಕರ್ನಾಟಕದ ಅತ್ಯಂತ ಪ್ರಮುಖವಾದ ಪ್ರಮುಖ ಬೆಳೆಯಾಗಿದೆ. ರೇಷ್ಮೆ ಕೃಷಿಯಲ್ಲಿದೇಶದಲ್ಲಿ ಅಗ್ರಸ್ಥಾನ ಪಡೆದಿರುವ ಕರ್ನಾಟಕ ರೇಷೆ ಉದಯಪಾತ ಮರು ಮುಂದಿದೆ .ಕರ್ನಾಟಕದ

ಕೆಲ ಜಿಲ್ಲೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಕೋಲಾರ ಮತ್ತು ಬೆಂಗಳೂರು

ಗ್ರಾಮಾಂತರ ಜಿಲ್ಲೆಗಳಲ್ಲಿ 'ಸಿಲ್ಕ್ ಮತ್ತು 'ಮಿಲ್ಕ್ ಗಳು ರೈತರ ನಿತ್ಯ ಜೀವನದ ಉಸಿರಾಗಿ  ರೈತರಿಗೆ ಉದ್ಯೋಗ ಕಲ್ಪಿಸುವಲ್ಲಿ ಮತ್ತು ಆದಾಯ ತರುವಲ್ಲಿ ಈ ಎರಡು ಕಸುಬುಗಳು ಪ್ರಮುಖ ಪಾತ್ರವಹಿಸುತ್ತಿವೆ. ದೇಶದ ಒಟ್ಟು ರೇಷ್ಮೆ ರಫ್ತು ವಿದೇಶಿ ವಿನಿಮಯ ಗಳಿಕೆಯಲ್ಲಿ 1/3 ಭಾಗಕ್ಕಿಂತಲೂ ಅಧಿಕ ಪಾಲನ್ನು ಕರ್ನಾಟಕ ರೇಷ್ಮೆ ಉದ್ಯಮ ಹೊಂದಿರುವುದು ರಾಜ್ಯದಲ್ಲಿ ಈ

ಉದ್ಯಮದ ಸ್ಥಾನವನ್ನು ತಿಳಿಯಪಡಿಸುತ್ತದೆ.

ರೇಷ್ಮೆ ಕೃಷಿಯ ಪ್ರಗತಿ

* ರೇಷ್ಮೆ ಕೃಷಿಯನ್ನು ರಾಜ್ಯದ್ದು ಹಲವಾರು ವರ್ಷಗಳಿಂದ ಅನುಸರಿಸಿಕೊಂಡು ಬರಲಾಗುತ್ತಿದೆ.2013ರ ಸೆಪ್ಟೆಂಬರ್ ಅಂತ್ಯದಲ್ಲಿ ರಾಜ್ಯದಲ್ಲಿ 78 ಸಾವಿರ ಹೆಕ್ಟೇರು ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯನ್ನು ಬೆಳೆಯಲಾಗಿದ್ದಿತು. 2012-13ರ ಅವಧಿಯಲ್ಲಿ 9.63 ಲಕ್ಷ ಜನರು ರೇಷ್ಮೆ ಕೃಷಿಯಲ್ಲಿಉದ್ಯೋಗ ಪಡೆದಿದ್ದರು. ಇದೇ ಅವಧಿಯಲ್ಲಿ ಕಚ್ಚಾ ರೇಷ್ಮೆಯ ಉತ್ಪಾದನೆ 7063 ಮೆಟ್ರಿಕ್ ಟನ್ನುಗಳಾಗಿತ್ತು.

**ರೇಷ್ಮೆ ಉದ್ಯಮದ ಸಮಸ್ಯೆಗಳು (Problems of silk industry)**

ಕರ್ನಾಟಕದಲ್ಲಿ ರೇಷ್ಮೆ ಉದ್ಯಮವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳನ್ನು ಈ ಮುಂದಿನಂತೆ ಪಟ್ಟಿಮಾಡಬಹುದು:

1. ರೇಷ್ಮೆ ಉತ್ಪನ್ನಗಳ ಬೆಲೆಗಳ ಏರಿಳಿತ

2. ವ್ಯವಸ್ಥಿತವಾಗಿಲ್ಲದ ಮಾರುಕಟ್ಟೆ

3. ಸೂಕ್ತ ಸೌಲಭ್ಯಗಳ ಅಭಾವ

4. ಬಂಡವಾಳದ ಸಮಸ್ಯೆ

- 5. ನೀರಾವರಿ ಸೌಕರ್ಯದ ಅಭಾವ

6. ಸರ್ಕಾರದ ದ್ವಂದ್ವ ನೀತಿ

7. ಮಿತಿಮೀರಿದ ಅಧಿಕಾರಿ ನಿಯಂತ್ರಣ

8. ಅಗ್ಗದ ಆಮದು ರೇಷ್ಮೆಯ ಪೈಪೋಟಿ ಸಮಸ್ಯೆ

9. ಕೃತಕ ರೇಷ್ಮೆ ಉತ್ಪನ್ನಗಳ ಪೈಪೋಟಿ ಸಮಸ್ಯೆ

10. ತಗ್ಗುತ್ತಿರುವ ರೇಷ್ಮೆ ಬೇಡಿಕೆ

11. ಗುಣಮಟ್ಟದ ಉತ್ಪಾದನೆಯ ಕೊರತೆ

12. ದ್ವಿತಳಿ ರೇಷ್ಮೆಯ ಕಡಿಮೆ ಉತ್ಪಾದನೆ, ಇತ್ಯಾದಿ.

**ಇತ್ತೀಚಿನ ಬೆಳವಣಿಗೆಗಳು (Recent developments)**

ಮೇಲಿನ ಸಮಸ್ಯೆಗಳ ಹೊರತಾಗಿಯೂ ಇತ್ತೀಚಿನ ದಿನಗಳಲ್ಲಿ ವೇದ ಕೃಷಿಯ ಕ್ಷೇತ್ರದಲ್ಲಿ ಕೆಲವೊಂದು ಆಶಾದಾಯಕ ಬೆಳವಣಿಗೆಗಳು ಕಾಣಿಸುತ್ತಿವೆ. ಇವುಗಳು ರೇಮ್ಮೆ ಕೃಷಿಯನ್ನು ಇನ್ನು ಬಲಪಡಿಸುವ ಸಾಧ್ಯತೆಗಳಿವೆ. ಅವುಗಳೆಂದರೆ;

1. ಉತ್ಪಾದನಾ ವಿಧಾನದಲ್ಲಿ ಸುಧಾರಣೆಗಳು

2. ಅಭಿವೃದ್ಧಿ ಪೂರಕ ವ್ಯಾಪಕ ಸಂಶೋಧನೆಗಳು

3. ಉತ್ಪಾದನಾ ತಂತ್ರದಲ್ಲಿನ ಸುಧಾರಣೆ

4, ರೇಷ್ಮೆ ಕೃಷಿಯನ್ನು ಪ್ರಮುಖ ಕಸುಬನ್ನಾಗಿ ಪರಿಗಣನೆ

5. ಅಧಿಕ ಇಳುವರಿ ತಳಿಗಳ ಶೋಧನೆ

6. ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವ ಸಾಧ್ಯತೆ

7. ಸಾವಯವ ಕೃಷಿ ವಿಧಾನದ ಅಳವಡಿಕೆ

**8. ರೈತರ ಹೆಚ್ಚಿದ ಆಸಕ್ತಿ, ಇತ್ಯಾದಿ**

ಇಷ್ಟಾಗಿಯೂ ಕರ್ನಾಟಕದಲ್ಲಿ ರೇಷ್ಮೆ ಉದ್ಯಮಕ್ಕೆ ಉಜ್ವಲ ಭವಿಷ್ಯವಿದೆ. ಅಪಾರ ಉದ್ಯೋಗಸೃಷ್ಟಿ ಮತ್ತು ಆದಾಯ ಉತ್ಪತ್ತಿಯ ಅವಕಾಶ ಹೊಂದಿರುವ ಈ ಉದ್ಯಮವನ್ನು ಸರ್ಕಾರ ಎಲ್ಲಾ ರೀತಿಯಿಂದ ಬೆಂಬಲಿಸುವ ಅಗತ್ಯವಿದೆ. ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಸೃಷ್ಟಿ ಮಾಡುವುದು, ರೇಷ್ಮೆ ಕೃಷಿಕರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸುವುದು, ಆಮದು ರೇಷ್ಮೆಯ ಸಮಸ್ಯೆಯನ್ನುಬಗೆಹರಿಸುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುವ ಮೂಲಕ ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಬಲಪಡಿಸಬೇಕಿದೆ.

## Chapter-3

## ಕೈಗಾರಿಕಾ ಅಭಿವೃದ್ಧಿ

- ಕರ್ನಾಟಕ ಆರ್ಥಿಕತೆಯಲ್ಲಿ ಕೈಗಾರಿಕೆಯ ಸ್ಥಾನ
- ಕರ್ನಾಟಕದ ಕೆಲ ಪ್ರಮುಖ ಕೈಗಾರಿಕೆಗಳು
- ಸಣ್ಣ ಪ್ರಮಾಣದ ಕೈಗಾರಿಕೆಗಳು
- ಕರ್ನಾಟದಲ್ಲಿ ಸಾರ್ವಜನಿಕ ಉದ್ಯಮ
- ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ

ಕೈಗಾರಿಕೀಕರಣದ ಅರ್ಥವಿವರಣೆ:- ವಿವಿಧ ಉದ್ಯಮಗಳು, ಕಾರ್ಖಾನೆಗಳು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸುವುದು ಮತ್ತು ಅವುಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸುವುದನ್ನು 'ಕೈಗಾರಿಕೀಕರಣ'ಅಥವಾ ಔದ್ಯೋಗೀಕರಣ' ಎನ್ನಲಾಗುವುದು, ಕೈಗಾರಿಕೀಕರಣ ಒಂದು ನಿರಂತರಪ್ರಕ್ರಿಯೆಯಾಗಿದ್ದು ಇದರಲ್ಲಿ ಹೊಸ ಹೊಸ ಉದ್ದಿಮೆಗಳು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತದೆ.

ಅಲ್ಲದೆ ಗಣಿಗಾರಿಕೆ, ವಿದ್ಯುತ್ ಸ್ಥಾವರಗಳ ಸ್ಥಾಪನೆ, ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳಅಭಿವೃದ್ಧಿ ಮುಂತಾದ ಚಟುವಟಿಕೆಗಳನ್ನೂ

ನಡೆಸಿಕೊಂಡು ಹೋಗಲಾಗುತ್ತದೆ. ಸಂಕ್ಷಿಪ್ತವಾಗಿ ಎಲ್ಲಾ ರೀತಿಯ ಕೈಗಾರಿಕೆಗಳ ಸ್ಥಾಪನೆ ಮತ್ತು ಅವುಗಳಿಗೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನುನಿರಂತರವಾಗಿ ನಡೆಸಿಕೊಂಡು ಹೋಗುವುದೇ ಕೈಗಾರಿಕೀರಣವಾಗಿದೆ.

**1, ಕರ್ನಾಟಕದ ಆರ್ಥಿಕತೆಯಲ್ಲಿ ಕೈಗಾರಿಕೆಗಳ ಸ್ಥಾನ (Importance of industries in Karnataka economy)**

1. ಉದ್ಯೋಗ ಸೃಷ್ಟಿ
2. ಅಧಿಕ ಉತ್ಪಾದನೆ
3. ರಾಜ್ಯಾದಾಯ ಮತ್ತು ತಲಾದಾಯ ಹೆಚ್ಚಳ
4. ಕೃಷಿ ಅಭಿವೃದ್ಧಿ

5, ಸಾರಿಗೆ ಸಂಪರ್ಕಾಭಿವೃದ್ಧಿ

6, ಉತ್ಪಾದನಾ ಸಾಮರ್ಥ್ಯದ ವೃದ್ದಿ

7. ಸಂಪನ್ಮೂಲಗಳ ಸದ್ಬಳಕೆ
8. ವಿದೇಶಿ ವಿನಿಮಯ ಗಳಿಕೆ

9, ಸಮತೋಲನ ಅಭಿವೃದ್ಧಿ

10. ಸರ್ಕಾರಕ್ಕೆ ಅಧಿಕ ವರಮಾನ

11. ಮನೋಭಾವನೆಯಲ್ಲಿ ಬದಲಾವಣೆಗಳು.

12. ಮಾರುಕಟ್ಟೆ ವಿಸ್ತರಣೆ

13, ಆರ್ಥಿಕ ಸ್ಥಿರತೆ ಮತ್ತು ಸ್ವಾವಲಂಬನೆ

14. ಕೈಗಾರಿಕೆ, ಕೃಷಿ ಮತ್ತು ತೃತೀಯರಂಗಗಳ ನಡುವೆ ಸಮತೋಲನ.

2. ಕರ್ನಾಟಕದ ಕೆಲ ಪ್ರಮುಖ ಕೈಗಾರಿಕೆಗಳು

**(Some important industries of Karnataka)**

ಕರ್ನಾಟಕ ರಾಜ್ಯವು ದೇಶದ ಕೈಗಾರಿಕಾ ಭೂಪಟದಲ್ಲಿ ಮಹತ್ವವಾದ ಸ್ಥಾನವನ್ನು ಪಡೆದಿದೆ.ರಾಜ್ಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ರಂಗದ ಕೈಗಾರಿಕೆಗಳೆರಡೂ ಅಸ್ತಿತ್ವದಲ್ಲಿದ್ದು ಬೃಹತ್ ಮತ್ತು ಮಧ್ಯಮ ಪ್ರಮಾಣದಲ್ಲಿ ಉತ್ಪಾದನೆಯನ್ನು ನಡೆಸುತ್ತಿವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ :ಕೆಲವು ಪ್ರಮುಖ ಕೈಗಾರಿಕೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

1. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ
2. ಸಿಮೆಂಟ್ ಕೈಗಾರಿಕೆ
3. ಜವಳಿ ಉದ್ಯಮ

4. ಸಕ್ಕರೆ ಕೈಗಾರಿಕೆ
5. ಕಾಗದ ಕೈಗಾರಿಕೆ
6. ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಕೈಗಾರಿಕೆ
7. ಪೆಟ್ರೋಕೆಮಿಕಲ್ ಕೈಗಾರಿಕೆ
8. ರಸಗೊಬ್ಬರ ಕೈಗಾರಿಕೆ
9. ಆಹಾರ ಸಂಸ್ಕರಣೆ ಕೈಗಾರಿಕೆ
10. ಇಂಜಿನಿಯರಿಂಗ್ ಸರಕು ಕೈಗಾರಿಕೆ
11. ದೂರ ಸಂಪರ್ಕ ಕೈಗಾರಿಕೆ
12. ಚಿನ್ನ ತಯಾರಿಕಾ ಕೈಗಾರಿಕೆ
13. ಸಾಬೂನು ಕೈಗಾರಿಕೆ
14. . ಯಂತ್ರಗಳು ಮತ್ತು ಯಂತ್ರೋಪಕರಣಗಳ ಕೈಗಾರಿಕೆ, ಇತ್ಯಾದಿ.

* ಕೈಗಾರಿಕೆಗಳ ವರ್ಗೀಕರಣ

1. ಸಣ್ಣ ಮತ್ತು ಗೃಹ ಕೈಗಾರಿಕೆಗಳು;

ಸಣ್ಣ ಪ್ರಮಾಣದಲ್ಲಿ ಬಂಡವಾಳ ಹೂಡಿ ಸಾಮಾನ್ಯ ಯಂತ್ರೋಪಕರಣಗಳು ಮತ್ತು ವಿದ್ಯುಚ್ಛಕ್ತಿಯನ್ನುಬಳಸಿ ಸಣ್ಣ ಪ್ರಮಾಣದಲ್ಲಿ ಉತ್ಪಾದನೆ ಕೈಗೊಳ್ಳುವ ಕೈಗಾರಿಕೆಗಳು ಸಣ್ಣ

ಕೈಗಾರಿಕೆಗಳು, ಕುಟುಂಬದ ಸಹಸದಸ್ಯರಸಹಾಯದಿಂದ ಪೂರ್ಣ ಅಥವಾ ಅರೆಕಾಲಿಕ ಉದ್ಯೋಗವನ್ನಾಗಿ ನಡೆಸಲ್ಪಡುವ ಕೈಗಾರಿಗೆಯ ಗೃಹ ಕೈಗಾರಿಕೆ.2. ಮಧ್ಯಮ ಪ್ರಮಾಣದ ಕೈಗಾರಿಕೆಗಳು, ನಿಖರ ಬಂಡವಾಳ ಹೂಡಿಕೆಯು ರೂ 1 ಕೋಟಿಗಿಂತ ಅಧಿಕವಿರುವ ಆದರೆ ರೂ 10 ಕೋಟಿಗಿಂತಕಡಿಮೆಯಿರುವ ಕೈಗಾರಿಕಾ ಘಟಕಗಳನ್ನು ಮಧ್ಯಮ ಪ್ರಮಾಣದ ಕೈಗಾರಿಕೆ ಎನ್ನಲಾಗುತ್ತದೆ.1. ಬೃಹತ್ ಪ್ರಮಾಣದ ಕೈಗಾರಿಕೆಗಳು,ನಿಖರ ಬಂಡವಾಳ ಹೂಡಿಕೆಯು ರೂ 10 ಕೋಟಿಗಳಿಗಿಂತ ಅಧಿಕವಿರುವ ಕೈಗಾರಿಕಾ ಘಟಕಗಳನ್ನುಬೃಹತ್ ಪ್ರಮಾಣದ ಕೈಗಾರಿಕೆಗಳು ಎನ್ನಲಾಗುತ್ತದೆ.

* ಕರ್ನಾಟಕದಲ್ಲಿ ಸಾರ್ವಜನಿಕ ಉದ್ಯಮಗಳ ಬೆಳವಣಿಗೆ

ಕರ್ನಾಟಕದಲ್ಲಿ ರಾಜ್ಯ ಸರ್ಕಾರದ ಒಡೆತನದಲ್ಲಿ ಹಲವಾರು ಸಾರ್ವಜನಿಕ ಉದ್ಯಮಗಳು ಸ್ಥಾಪನೆಗೊಂಡಿದ್ದುಅವುಗಳನ್ನು ಕೆಳಗಿನಂತೆ ವಿಂಗಡಿಸಬಹುದು.

1. ತಯಾರಿಕಾ ಉದ್ಯಮಗಳು

2. ಸೇವಾ ಉದ್ಯಮಗಳು

3. ಹಣಕಾಸು ಸಂಸ್ಥೆಗಳು

4.ಸಾರ್ವಜನಿಕ ಉಪಯುಕ್ತತೆಯ ಉದ್ಯಮಗಳು

5, ಅಭಿವೃದ್ಧಿಶೀಲ ದಮಗಳು (ವಾಣಿಜ್ಯ)

6.ಅಬಿವೃದ್ಧಿಶೀಲ ಉದ್ಯಮಗಳು (ವಾಣಿಜೇತರ)

7, ಮಾರುಕಟ್ಟೆ ಮತ್ತು ಜಾಹಿರಾತು ಉದ್ಯಮಗಳು

* ಕರ್ನಾಟಕದಲ್ಲಿ ಸಣ್ಣ ಕೈಗಾರಿಕೆಗಳ ಮಹತ್ವ

1. ಉದ್ಯೋಗ ಸೃಷ್ಟಿ

2. ರಾಜ್ಯಾದಾಯಕ್ಕೆ ಕೊಡುಗೆ

3, ಮಿತ ಉತ್ಪಾದನೆ

4. ಮಿತ ಬಂಡವಾಳ

5, ಮಿತ ಕೌಶಲ

6. ಮಿತ ಆಮದು

7. ಶೀಘ್ರ ಫಲದಾಯಕ

8. ವಿಕೇಂದ್ರೀಕರಣ

9, ವರಮಾನದ ಸಮಾನ ಹಂಚಿಕೆ

10, ವಿದೇಶಿ ವಿನಿಮಯ ಗಳಿಕೆ

11. ಕೃಷಿಗೆ ಸಹಾಯಕ

12. ದೊಡ್ಡ ಕೈಗಾರಿಕೆಗಳಿಗೆ ಬೆಂಬಲ

13, ಫ್ಯಾಕ್ಟರಿ ವ್ಯವಸ್ಥೆಯ ಅನಿಷ್ಟಗಳಿಲ್ಲ

14. ಸ್ಥಳೀಯ ಸಂಪನ್ಮೂಲಗಳ ಬಳಕೆ

15. ಸರ್ಕಾರಕ್ಕೆ ಹೆಚ್ಚಿನ ಆದಾಯ

16. ವೈಯಕ್ತಿಕ ನಿರೀಕ್ಷಣೆ

17. ಸಮಾಜವಾದಿ ಸಮಾಜದ ನಿರ್ಮಾಣ

# ಸಣ್ಣ ಮತ್ತು ಗೃಹ ಕೈಗಾರಿಕೆಗಳ ಸಮಸ್ಯೆಗಳು

1. ಬಂಡವಾಳದ ಕೊರತೆ

2. ಕಚ್ಚಾ ಸಾಮಗ್ರಿಗಳ ಸಮಸ್ಯೆ

3. ಯಂತ್ರೋಪಕರಣಗಳ ಸಮಸ್ಯೆ

4. ಮಾರುಕಟ್ಟೆ ಸಮಸ್ಯೆ

5. ಹಿಂದುಳಿದ ತಂತ್ರಜ್ಞಾನ

6. ಅದಕ್ಷ ಆಡಳಿತ

7. ವಿದ್ಯುತ್ ಕೊರತೆ

8. ದೊಡ್ಡ ಕೈಗಾರಿಕೆಗಳಿಂದ ಸರ್ದೆ

9. ಸಾರಿಗೆ ಸೌಲಭ್ಯದ ಕೊರತೆ

10. ತರಬೇತಿ ಮತ್ತು ಸಂಶೋಧನಾ ಸೌಲಭ್ಯದ ಕೊರತೆ

11. ಉತ್ಪಾದನಾ ಸಾಮರ್ಥ್ಯದ ಅಪೂರ್ಣ ಬಳಕೆ

12. ಸ್ಥಳೀಯ ತೆರಿಗೆಗಳ ಹೊರೆ

13. ಪಿಳಂಬ ಪಾವತಿಯ ಸಮಸ್ಯೆ

14. ಮೀಸಲಾತಿ ಹಿಂತೆಗೆತ.

ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ನೆರವು.

1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ

2. ಕೈಗಾರಿಕಾ ವಿಕಾಸ ಯೋಜನೆ

3. ತಾಂತ್ರಿಕ ಸಹಾಯ.

4, ಹಣಕಾಸಿನ ಸಹಾಯ

5. ಮಾರುಕಟ್ಟೆ ಸಹಾಯ

**6. ಕಾರ್ಮಿಕರಿಗೆ ತರಬೇತಿ**

**7. ಖಜಾನೆ ಉತ್ತೇಜಕಗಳು**

**8. ವಿದ್ಯುತ್ ಪೂರೈಕೆ**

## Chapter -4

**ಕರ್ನಾಟಕದಲ್ಲಿ ಸಹಕಾರಿ ಚಳುವಳಿ**

- **ಸಹಕಾರದ ಅರ್ಥವಿವರಣೆ**
- **ಸಹಕಾರದ ಮೂಲ**
- **ಸಹಕಾರಿ ಚಳುವಳಿಯ ಸಂಕ್ಷಿಪ್ತ ಇತಿಹಾಸ**
- **ಸಹಕಾರಿ ಚಳುವಳಿ ಯ ಗುಣ ದೊಷಗಳು**

1. ಸಹಕಾರದ ಅರ್ಥವಿವರಣೆ

ಸಹಕಾರ ಎಂದರೆ ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರರ ಹಿತಾಸಕ್ತಿಗಳನ್ನು ಕಾಪಾಡಲು ಸಾಂಘಿಕವಾಗಿ ಪ್ರಯತ್ನಿಸುವ ಒಂದು ವ್ಯವಸ್ಥೆಯಾಗಿದೆ. ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವಇಚ್ಛೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ, "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" **(Eachi for all and all for Clict)** ಎಂಬುದು ಸಹಕಾರದ ಮೂಲ ತತ್ವವಾಗಿದೆ. ಈ ವ್ಯವಸ್ಥೆಯಲ್ಲಿಅಲ್ಪದಾಯದ ವ್ಯಕ್ತಿಗಳಿಗೆ ಹೆಚ್ಚು ಅನುಕೂಲವಾಗುತ್ತದೆ.

ಲಕ್ಷಣಗಳು **(IFcintuires)**

ಸಹಕಾರಿ ಸಂಸ್ಥೆ ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತದೆ.

1, ಸ್ವಯಂ ಪ್ರೇರಣೆಯ ಸಂಘಟನೆ,

2. ಮುಕ್ತ ಸದಸ್ಯತ್ವ,

3. ಪ್ರಜಾಪ್ರಭುತ್ವ ಸಂಸ್ಥೆ

4. ಐಚ್ಛಿಕ ಸದಸ್ಯತ್ವ,

5 ಸ್ವಸಹಾಯ ಮತ್ತು ಪರಸ್ಪರ ಸಹಾಯ

6, ಸೇವೆಯೇ ಮುಖ್ಯ ಗುರಿ,

7.ಲಾಭ ಗಳಿಕೆ ಗೌಣ,

8.ಲಾಭದ ನಯವಾದಹಂಚಿಕ

9. ಸರ್ಕಾರದ ಹತೋಟಿಯಿರುತ್ತದೆ.

**2. ಮೂಲ (Origin)**

ಜರ್ಮನಿಯ ಫೋನ್ ರೈಫಿಜನ್ (1818-1888) ಮತ್ತು ಡೆಲಿಶ್ನ ಹೆರ್ ಶೋಲ್ಜ ಅವರನ್ನು (1509-1883) ಆಧುನಿಕ ಸಹಕಾರಿ ಆಂದೋಲನದ ಮೂಲ ಪುರುಷರೆಂದು ಕರೆಯಲಾಗಿ. ಈ ಈರ್ವರು ಜನಕರ ಮೇರೆಗೆ ಸಹಕಾರಿ ಸಂಘಗಳನ್ನು 1. ರೈಫಿಜನ ಮಾದರಿಯ

ಅಥವಾ ಗ್ರಾಮೀಣ ಸಂಘಗಳು ಮತ್ತು 2. ಪೂಲ್ಸ್ ಡಲಿಕ್ ಮಾದರಿಯ ಅಥವಾ ನಗರ ಪ್ರದೇಶದ ಸಂಘಗಳೆಂದು ವರ್ಗೀಕರಿಸಬಹುದು.

ರೈಫಿಜನ್ ಮಾದರಿಯ ಸಂಘಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸಂಘಟಿಸಲಾಗುತ್ತದೆ. ಸಂಘದಸಂಘದ ಕಾರ್ಯಕ್ಷೇತ್ರ ಗ್ರಾಮಕ್ಕೆ ಸೀಮಿತವಾಗಿದ್ದು ಸದಸ್ಯರ ಹೊಣೆಗಾರಿಕೆ ಅಪರಿಮಿತವಾಗಿರುತ್ತದೆ.

ವೇತನವಿಲ್ಲದ ಗೌರವ ಕಾರ್ಯಕರ್ತರಿಂದ ಈ ಸಂಘಗಳನ್ನು ನಡೆಸಲಾಗುತ್ತದೆ. ಮೂಲ್ ಶೋಲ್ಜಾ ಸಂಘಗಳು ನಗರ ಪ್ರದೇಶಗಳಲ್ಲಿ ಸ್ಥಾಪಿಸಲ್ಪಡುತ್ತವೆ. ಸದಸ್ಯರ ಹೊಣೆಗಾರಿಕೆಮಿತವಾಗಿದ್ದು ಸಂಘಕ್ಕೆ ಲಾಭದ ದೃಷ್ಟಿಯಿರುತ್ತದೆ. ಕಾರ್ಯಕರ್ತರಿಗೆ ವೇತನ ನೀಡಲಾಗುತ್ತದೆ.

**3, ಭಾರತದಲ್ಲಿ ಸಹಕಾರಿ ಚಳುವಳಿಯ ಸಂಕ್ಷಿಪ್ತ ಇತಿಹಾಸ**

**(A brief history of co-operative movement in india)**

ಭಾರತದಲ್ಲಿ ಸಹಕಾರಿ ಚಳುವಳಿಯ ಇತಿಹಾಸ 19ನೇ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾಯಿತು. ಆಗ ಪಂಜಾಬ್ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಅನೇಕ ಪತ್ತಿನ ಸಹಕಾರ ಸಂಘಗಳು ಸ್ಥಾಪಿಸಲ್ಪಟ್ಟವು. ಅದೇ ಕಾಲದಲ್ಲಿ ಜರ್ಮನಿಯಲ್ಲಿ ನಡೆಯುತ್ತಿದ್ದ ಸಹಕಾರಿ ಆಂದೋಳನವನ್ನು

ಅಭ್ಯಾಸ ಮಾಡಲು ಆಗಿನ ಮದ್ರಾಸ್ ಸರ್ಕಾರ ಸರ್ ಫೆಡ್ರಿಕ್ ನಿಕೋಲ್ಸನ್ ಅವರನ್ನು ಕಳಿಸಿಕೊಟ್ಟಿತು. ನಿಕೋಲ್ಕನ್ 1895ರಲ್ಲಿ ವರದಿ ಸಲ್ಲಿಸಿ ರೈಫಿಜನ್ ಮಾದರಿಯಲ್ಲಿ

ಸಹಕಾರಿ ಸಂಘಗಳನ್ನು ಸ್ಥಾಪಿಸಬೇಕೆಂದು ಶಿಫಾರಸು ಮಾಡಿದರು. 1901ರಲ್ಲಿ ಕ್ಷಾಮ ಪರಿಹಾರ ಸಮಿತಿ ಸಹ ಇದೇ ಮಾದರಿಯ ಸಂಘಗಳನ್ನು ಸ್ಥಾಪಿಸುವಂತೆ ಶಿಫಾರಸು ಮಾಡಿತು. ಆ ಮೇರೆಗೆಸರ್ಕಾರ 1904ರಲ್ಲಿ ಸಹಕಾರಿ ಸಂಘಗಳ ಕಾಯಿದೆಯನ್ನು ಜಾರಿ ಮಾಡಿತು. ಈ ಕಾಯಿದೆಯ ಭಾರತದಲ್ಲಿ ಸಹಕಾರಿ ಚಳುವಳಿಗೆ ಅಡಿಪಾಯ ಹಾಕಿತು. ಇಲ್ಲಿಂದ ಭಾರತದಲ್ಲಿ ಸಹಕಾರಿಆಂದೋಲನ ಆರಂಭವಾಯಿತು.

1904ರ ಸಹಕಾರ ಸಂಘಗಳ ಕಾನೂನು ಗ್ರಾಮೀಣ ಭಾಗದಲ್ಲಿ ರೈಫಿಜನ್ ಮಾದರಿಯಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಮೂಲ್ಸ್ ಡೆಲಿಶ್ ಮಾದರಿಯ ಸಂಘಗಳನ್ನು ಸ್ಥಾಪಿಸಲು ಅವಕಾಶ ನೀಡಿತು. ಆದರೆ ಈ ಕಾಯಿದೆಯಲ್ಲಿ ಹಲವು ನ್ಯೂನತೆಗಳಿದ್ದವು. ಈ ಕಾನೂನು ಸಾಲ ನೀಡುವ ಸಂಘಗಳಿಗೆ ಅವಕಾಶ ನೀಡಿರಲಿಲ್ಲ ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳೆಂಬ ವರ್ಗೀಕರಣವನ್ನು

ವೈಜ್ಞಾನಿಕವಾಗಿ ಮಾಡಿರಲಿಲ್ಲ. ಆದುದರಿಂದ ಈ ದೋಷಗಳ ನಿವಾರಣೆಗೆ1912ರಲ್ಲಿ ಹೊಸದಾದ ಸಹಕಾರಿ ಸಂಘಗಳ ಕಾನೂನು ಜಾರಿಗೆ ಬಂದಿತು.1919ರ ಸರ್ಕಾರ ಮತಿಂದು ಸಹಕಾರಿ ಕಾನೂನನ್ನು ರಚಿಸಿ, ಸಹಕಾರವುಅಧಿಕಾರಕ್ಕೆ ವರ್ಗಾಯಿಸಿತು. ಈ ಕಾಯಿದೆ ರಾಜ್ಯಗಳಿಗೆ 1912ರ ಸಹಕಾರಿ ಸಂಘಗಳ ಕಾನೂನುಅನುಸರಿಸುವ ಅಥವಾ ತಮ್ಮದ ಕಾನೂನನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ ನೀಡಿತು. ಪರಿಣಮಗಳು ತಮ್ಮ ಪಾದೇಶಿಕ ಅಗತ್ಯಗಳಿಗೆ ತಕ್ಕಂತೆ ಸಹಕಾರಿ ಸಂಘಗಳನ್ನು ರಚಿಸಿಕೊಂಡವು. ಪ್ರಪಂಚದ ಮಹಾ ಆರ್ಥಿಕ ಮುಗ್ಗಟ್ಟು ಸಹಕಾರ ಚಳುವಳಿಗೆ ದೊಡ್ಡ ಆಘಾತ ನೀಡಿತು .ದ್ವಿತೀಯ ಮಹಾಯುದದ ವೇಳೆಯಲ್ಲಿ ಸಹಕಾರಿ ರಂಗ ಪನಃ ಚೇತರಿಸಿಕೊಂಡಿತು.

ಸ್ವಾತಂತ್ರ್ಯಾ ನಂತರ

ದೇಶದ ಸ್ವಾತಂತ್ರ ದ ತರುವಾಯ ಸಹಕಾರಿ ಚಳುವಳಿ ಸರ್ಕಾರದಿಂದ ಉತ್ತಮ ಪೂವ್ರ ಪಡೆಯಿತು. ಪಂಚವಾರ್ಷಿಕ ಯೋಜನೆಗಳಾವಧಿಯಲ್ಲಿ ಸಹಕಾರಿ ಚಳುವಳಿ ಅಭಿವೃದಿಯ ಮೂಲಮಂತ್ರವಾಯಿತು. ಈ ಅವಧಿಯಲ್ಲಿ ವಿವಿಧ ರೀತಿಯ

ಸಹಕಾರಿ ಸಂಘಗಳು ಸ್ಥಾಪನಗೊಂಡವು. ಕರ್ನಾಟಕ, ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ. ಪಂಜಾಬ್ಪಂಜಾಬ್, ಹರ್ಯಾಣ ಮುಂತಾದ ರಾಜ್ಯಗಳಲ್ಲಿ ಸಹಕಾರಿ ಚಳುವಳಿ ಅದ್ವಿತೀಯ ಪ್ರಗತಿಸಾಧಿಸಿತು. ಸಹಕಾರಿ ಆಂದೋಲನ ದೇಶದ ಮೂಲೆ ಮೂಲೆಗೂ ಹಬ್ಬಿತು. ಸಣ್ಣ ಮತ್ತು ಗ್ರಹ

ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಹಕಾರಿ ಸಂಘಗಳನ್ನು ವಿಶೇಷವಾಗಿ ಆಶ್ರಯಿಸಲಾಯಿತು. ಆರ್ಥಿಕತೆಯಆರ್ಥಿಕತೆಯ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರಿ ಸಂಘಗಳು ತಲೆ ಎತ್ತಿದವು.ಸರಕಾರದ ಪ್ರಗತಿ ಭಾರತದಲ್ಲಿನ ಸಹಕಾರಿ ವಲಯವು ಇಂದು ಜಗತ್ತಿನಲ್ಲೇ ಅತ್ಯಂತ ದೊಡ್ಡದಾಗಿದೆ.

**1950-51ರಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಂಖ್ಯೆ 1.05 ಲಕ್ಷದಷ್ಟಿದ್ದು 44 ಲಕ್ಷ ಸದಸ್ಯರನ್ನು ಹೊಂದಿದ್ದವು. ಅವು ರೂ. 37.25 ಕೋಟಿ ಪಾಕ್ಕಿ ಬಂಡವಾಳ ಹೊಂದಿದ್ದವುಹಾಗೂ ರೂ. 23 ಕೋಟಿ ಸಾಲ ನೀಡಿದ್ದವು. 1998-99ರ ವೇಳೆಗೆ 3.95 ಲಕ್ಷ ವಿವಿಧ ರೀತಿಯ ಸಹಕಾರ ಸಂಘಗಳು 18.96 ಕೋಟಿ ಸದಸ್ಯರೊಂದಿಗೆ ಅಸ್ತಿತ್ವದಲ್ಲಿದ್ದವು. ಈ ವೇಳೆಯಲ್ಲಿ ಅವುಗಳ**

ಚಾಲ್ತಿ ಬಂಡವಾಳ ರೂ. 1,18,7K◌ು ಕೋಟಿಯಾಗಿದ್ದಿತು ಹಾಗೂ ಕೃಷಿಗೆ 1999 - 2004ರಲ್ಲಿ ರೂ. 18,249 ಕೋಟಿ ಸಾಲ ನೀಡಿದ್ದವು. ಇದೇ ವೇಳೆಯಲ್ಲಿ 19 ರಾಜ್ಯ ಭೂ ಅಭಿವೃದ್ಧಿ ಬ್ಯಾಂಕುಗಳು ಮತ್ತು 7,460 ಪ್ರಾಥಮಿಕ ಕೃಷಿ ಮಾರುಕಟ್ಟೆ ಸಂಘಗಳು 43 ಲಕ್ಷ ಸದಸ್ಯರೊಂದಿಗೆಅಸ್ತಿತ್ವದಲ್ಲಿದ್ದವು. ಮಾರ್ಚ್ 2006ರಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಸಂಖ್ಯೆ 1,06,330ಹಾಗೂ ಸದಸ್ಯರ ಸಂಖ್ಯೆ ಸುಮಾರು 10 ಕೋಟಿಯಾಗಿದ್ದಿತು. 2000-01ರಲ್ಲಿ ಕೃಷಿ ಸಹಕಾರಿಪತ್ತಿನ ಸಂಘಗಳು ಒಟ್ಟು ರೂ. 34,520 ಕೋಟಿ ಸಾಲ ನೀಡಿದವು.A 2011-12ರಲ್ಲಿ ಸಹಕಾರಿ ಬ್ಯಾಂಕುಗಳು 30 ಲಕ್ಷ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು (KCC) ವಿತರಿಸಿ: ಕೃಷಿಗೆ ರೂ. 10,642 ಕೋಟಿ ಸಾಲ ನೀಡಿದ್ದವು.

- ಸಹಕಾರಿ ಸಂಘಗಳ ವಿಧಗಳು

1, ಸಹಕಾರಿ ಪತ್ತಿನ ಸಂಘಗಳು

11, ಇತರ ಸಹಕಾರಿ ಸಂಘಗಳ

ವಿಧಗಳಿವೆ.

ಸಹಕಾರಿ ಪತ್ತಿನ ಸಂಘಗಳು.

1. ಕೃಷಿ ಪತ್ತಿನ ಸಂಘಗಳು.

1. ಅಲ್ಪಾವಧಿ ಕೃಷಿ ಪತ್ತಿನ ಸಂಘಗಳು.

1) ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು.

i) ಕೇಂದ್ರ ಸಹಕಾರಿ ಬ್ಯಾಂಕುಗಳು,

iii) ರಾಜ್ಯ ಸಹಕಾರಿ ಅಪಕ್ಸ್ ಬ್ಯಾಂಕು.

2. ಧೀರ್ಘಾವಧಿ ಕೃಷಿ ಪತ್ತಿನ ಸಂಘಗಳು.

1) ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು.

ii) ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು.

b. ಕೃಷಿಯೇತರ ಪತ್ತಿನ ಸಂಘಗಳು

1. ನಗರ ಸಹಕಾರಿ ಬ್ಯಾಂಕುಗಳು.

2. ನೌಕರರ ಸಹಕಾರಿ ಪತ್ತಿನ ಸಂಘಗಳು.

ಸಹಕಾರಿ ಚಳುವಳಿಯ ಪ್ರಯೋಜನಗಳು

1. ಸುಲಭ ಸಾಲ ಸೌಲಭ್ಯ

2. ಉಳಿತಾಯ ಮತ್ತು ಹೂಟೆಗೆ ಉತ್ತೇಜನ

3. ಸುಧಾರಿತ ಕೃಷಿ ಪದ್ಧತಿಗಳು

4, ಅಧಿಕ ಉತ್ಪಾದನೆ

5. ಆಡಳಿತ ತರಭೇತಿ

6, ಅವಶ್ಯಕ ಸಾಮಗ್ರಿಗಳ ಪೂರೈಕೆ

7. ಯೋಗ್ಯ ಬೆಲೆ

8, ಸಾಮಾಜಿಕ ಲಾಭಗಳು

9. ನೈತಿಕ ಲಾಭಗಳು

10. ರಾಜಕೀಯ ತಿಳುವಳಿಕೆ

ಈ ಸಹಕಾರ ಚಳುವಳಿಯ ದೋಷಗಳು

1. ಬಂಡವಾಳ ಕೊರತೆ

2. ರಾಜಕೀಯ ಹಸ್ತಕ್ಷೇಪ

3.ತರಬೇತಿಯ ಅಭಾವ

4.ಮಿತಿ ಮೀರಿದ ಬಾಕಿದಾರರು

5, ಅರಿವಿನ ಅಭಾವ

6. ಲೇವಾದೇವಿಗಾರರಿಂದ ವಿರೋಧ

7.ಇತರೆ ಕಾರ್ಯಗಳ ಉಪೇಕ

8. ಅದಕ್ಷತೆ ಮತ್ತು ಭ್ರಷ್ಟಾಚಾರ,

9. ಜನಪ್ರಿಯವಾಗಿಲ್ಲ.

ENd